THE BOOK WAS DRENCHED

UNIVERSAL
LIBRARY
OU_200632
UNIVERSAL
LIBRARY

Checked

CHECKED. 1951

KARNATAKA

# Kabya Kalanidhi Series,

No 4.

ಶ್ರೀನಾಸಕವಿ ವಿರಚಿತ

ಶ್ರೀಮದ್ರಾಜಾಧಿರಾಜ ಶ್ರೀಕೃಷ್ಣರಾಜ ಸಾರ್ವಭೌಮ

# ವರ್ಷವರ್ಧಂತೀಶತಕಂ.

ಎಸ್. ಜಿ. ನರಸಿಂಹಾಚಾರ್

ಲೈಬ್ರೇರಿಯನ್ ಗಾರ್ನಮೆಂಟ್ ಓರಿಯಂಟಲ್ ಲೈಬ್ರರಿ ಮೈಸೂರ್,

ಮತ್ತು

ಮಂ. ಆ. ರಾಮಾನುಜ ಯ್ಯಂಗಾರ್

ಅಸಿಸ್ಟೆಂಟ್ ಮಾಸ್ಟರ್ ವೆಸ್ಲಿಯನ್ ಮಿಷ ಸ್ಕೂಲ್ ಮೈಸೂರ್

ಇವರುಗಳಿಂದ ಶೋಧಿಸಲ್ಪಟ್ಟು

ಮೈಸೂರ್:

ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು.

1901.

*Registered according to Act XXV of 1867*

[ALL RIGHTS RESERVED.]

# ಪೀಠಿಕೆ.

ಈ ಗ್ರಂಥಕರ್ತನಿಗೆ ಶ್ರೀನಿವಾಸನೆಂದು ಹೆಸರು. ಈತನು ಗೋಕರ್ಣನಿವಾಸಿ; ಶಾಂಡಿಲ್ಯಗೋತ್ರದ ವೈಷ್ಣವ ಬ್ರಾಹ್ಮಣನು. ಇವನ ತಂದೆಗೆ ನಾರಾಯಣನೆಂದು ಹೆಸರು. ಕವಿಯು ಮುಮ್ಮಡಿ ಕೃಷ್ಣರಾಜಒಡೆಯರವರ ವರ್ಷವರ್ಧಂತಿಯ ಮಹೋತ್ಸವವನ್ನು ನೋಡುವುದಕ್ಕಾಗಿ ಪತ್ನೀಪುತ್ರರೊಡನೆ ಗೋಕರ್ಣದಿಂದ ಮೈಸೂರಿಗೆ ಬಂದು, ಅಲ್ಲಿ ತಾನು ಕಂಡ ಮಹೋತ್ಸವದ ವಿಭವಗಳನ್ನೆಲ್ಲಾ ವಾರ್ಧಿಕಷಟ್ಪದಿಗಳಿಂದ ಈ ಗ್ರಂಥರೂಪವಾಗಿ ರಚಿಸಿದ್ದಾನೆ. ಇದರ ಬಂಧವು ಲಲಿತವಾಗಿಯೂ ಹೃದ್ಯವಾಗಿಯೂ ಇದೆ.

ಇದರಲ್ಲಿ ರಾಜಧಾನಿಯಾದ ಮೈಸೂರು ನಗರದ ವರ್ಣನೆಯೂ, ವರ್ಧಂತೀಮಹೋತ್ಸವದಲ್ಲಿ ನಡೆವ ಎಲ್ಲಾ ಪದ್ಧತಿಗಳೂ ಕ್ರಮವಾಗಿ ವರ್ಣಿಸಲ್ಪಟ್ಟಿರುವುದರಿಂದ, ಮೈಸೂರು ದೇಶದ ಕನ್ನಡಿಗರಿಗೆಲ್ಲಾ ಇದು ಆಹ್ಲಾದಕರವಾಗದೆ ಇರಲಾರದು.

# ಶ್ರೀಮದ್ರಾಜಾಧಿರಾಜ ಶ್ರೀ ಕೃಷ್ಣರಾಜ ಸಾರ್ವಭೌಮ

# ವರ್ಷವರ್ಧಂತೀಶತಕಂ.

(ವಾರ್ಧಿಕ ಷಟ್ಪದಿ.)

ಶ್ರೀಕಮಲವಾಸಿನಿಯು ನೀಲಕುಂತಲಗಳುಂ |
ಶ್ರೀಕಮಲಲೋಚನೆಯು ಕಳ್ಕ್ರಪಾಂಘ್ರಿಪ್ಲವಂ |
ಶ್ರೀಕಮಲವದನೆಯು ಸುಕುಂದವರರದನಂಗಳುಂ ಮಹಾಪದ್ಮೆಯೆಂಬ ‖
ಕೇಶವಪ್ರಿಯೆಯು ವರಶಂಖಸತ್ಕಂಠವುಂ |
ಶ್ರೀಕಾಮಿನೀಮದನರೇಖಾಕುಚಂಗಳುಂ |
ಶ್ರೀಕರಮುಕುಂದರಮಣಿಯು ಕರವುಮೆಮಗಧಿಕಪೋಷಣಮಂ ತಾಂ ಮಾಡುಗೆ ‖ ೧

ಸಾಗರಾತ್ಮಜೆಯು ನಸುನಗೆಗಳಿಂ ಪಸರಿಸಿತೊ |
ಭೋಗಿವಲ್ಲಭಭೋಗಕಾಂತಿಗಳ್ ವ್ಯಾಪಿಸಿತೊ |
ರಾಗರಹಿತರ ಮನದ ವಾಸದಿಂ ಸತ್ವಗುಣಮುತ್ಕರ್ಷದಿಂ ನೂಪಿಸ ‖
ವಾಗೀಶಮೂರುತಿಯು ಕಾಂತಿಮಯಚಂದ್ರಿಕೆಯು |
ಸಾಗರಾಮೃತಪಾನಗೆಯ್ವ ಸಂತಸದಿಂದ |
ಬೇಗದಿಂ ಬೆಂಬಿಡದೆ ನಲಿವ ಮನ್ಮಾನಸಚಕೋರಮೇ ಧನ್ಯನಿಳೆಗೆ ‖ ೨

ಇಂದುಶಕಲಾಧರಾನಂದದಾಯಕಿಯೆ ಮುದ |
ದಿಂದಲಾಯದುಕುಲದ ಭೂಪರಂ ಪಾಲಿಸಲು |
ಬಂದು ಚಾಮುಂಡಿಯೆಂಬಭಿಧೆಯೊಳ್ ನೆಲಸ್ಯೆದು ಸುಂದರಾಂಗಿಯೆ ಬೇಗದಿ ‖
ಅಂದು ಯದುಕುಲತಿಲಕಚಾಮರಾಜೇಂದ್ರಂಗೆ |
ಕುಂದದಂತಾಕುಲವು ಕುಂದೇಂದುವಿನಸೆ ಮುದ |
ದಿಂದ ಸಂತಾನವಂ ಸಕಲಸೌಖ್ಯಗಳಿತ್ತು ಚಾಮುಂಡಿಕಾಂಬೆ ಸಲಹು ‖ ೩

ಜಲನಿಧಿಗಳೊಳ್ ಕಳಂಜಲಧಿ ರಾಜಿಸುವಂತೆ |
ಲಲಿತಶೈಲಂಗಳೊಳ್ ಕನಕಗಿರಿ ಮೆಚ್ಚುವಂತೆ |
ಲಲಿತಸರಸಿಗಳೊಳಗೆ ಮಾನಸಸರೋವರಂ ಪೊಳವಂತೆ ಮೇದಿನಿಯೊಳು ‖
ಫಲಿತದ್ರುಮಂಗಳಿಂ ಪೈರ್ಗಳಿಂ ಕೊಳಗಳಿಂ |
ಸಲೆ ವಿರಾಜಿಸುತಿರ್ಪ ಕರ್ನಾಟಜನಪದಂ |
ಜ್ವಲಿಸುತ್ತೈನತ್ತು ಬಾನೇಶಂಗಳೊಳ್ ಸಕಲಸಂಪತ್ತಿನಿಂ ಮೆರೆವುದು ‖ ೪

ಆದೇಶದರಸುಗಳ ಸಂತತಿಗೆ ಶೇಖರಂ ।
ಶ್ರೀದೇವಕೀತನಯುಭಕ್ತಿರತ್ನಾಕರಂ ।
ಭೂದೇವಸಮುದಯುಕೆ ಸಕಲಸಂಪತ್ಕರಂ ಶ್ರೀಕರಂ ಕೀರ್ತಿಕರನು ॥
ಆದರದಿ ನಿಜಕುಲದ ಜನಕೆ ಬೋಧಾಕರಂ ।
ಯಾದವಾನ್ವಯುವೆಂಬ ಜಲಧಿಗೆ ಸುಧಾಕರಂ ।
ಶ್ರೀದಸದೃಶನು ಕೃಷ್ಣರಾಜನೃಪನೆಂಬರಸು ಸೊಗಸಿಂದ ರಾಜಿಸುವನು ॥ ೫

ಆವಿಭುವಿನಪರಿಮಿತಸಂಭ್ರಮೋತ್ಕರ್ಷದಿಂ ।
ತೀವಿದೊಡ್ಡಂತಿಯುುತ್ಸವದ ವರ್ಣನೆಯುನತಿ ।
ಕೋವಿದಜನೋತ್ತಂಸ ನಾರಾಯುಣಾಖ್ಯಸದ್ವೈಲಷ್ಣವತನೂಜಾತನು ॥
ಶ್ರೀವಾಸನೆಂಬೊರ್ವ ಶಾಂಡಿಲ್ಯಗೋತ್ರಸಂ ।
ಭಾವಿತಬ್ರಾಹ್ಮಣಂ ಕರ್ಣಾಟಭಾಷೆಯಿಂ ।
ಗೈವನದ್ಭುತವಾದ ವಾರ್ಧಿಕಸುಷಟ್ಪದೀವೃತ್ತದಿಂ ಹರಿಕೃಪೆಯೊಳು ॥ ೬

ದಿವ್ಯರತ್ನಾಕರಂ ಗುಂಜಿಯುಂ ಗ್ರಹಿಸುವಂ ।
ಭವ್ಯಗಂಗಾಧರಂ ಕಲಶಜಲಸೇವಕನು ।
ಮವ್ಯಯುಪ್ರೀತಿಯಿಂ ಸ್ವೀಕಾರವಮಂ ಮಾಳ್ಪನಾದಿತ್ಯನುಂ ಪ್ರೇಮದಿ ॥
ನವ್ಯಪೂಜೆಯೊಳೊಂದು ದೀಪಕೋಷಿತನಪ್ಪ ।
ಸೇವ್ಯವಿದ್ಯಾನಿಧಿಗಳುಂ ಬಾಲಕಲ್ಪಿತದ ।
ಕಾವ್ಯಮಂ ಪ್ರೀತಿಯಿಂ ಗ್ರಹಿಪರೆಂಬಾಶೆಯಿಂ ಪೇಳ್ವೆ ನಾ ನಿರ್ಭಯುದೊಳು ॥ ೭

ಜಗದೊಡೆಯು ಮುಕ್ಕಣ್ಣ ಜಗದ ಜನಮುಳಿವಂತೆ ।
ವಿಗಡವಿಷಮಂ ತನ್ನ ಕಂಠದೊಳ್ ತೊಡನಿಟ್ಟು ।
ನಗಜೆಯು ಪ್ರಿಯುನಮೃತಕರನ ನಿಜಶಿರದೊಳಗೆ ಪೊತ್ತು ತಾ ಮೆಱೆಯಿಸುವನು ॥
ಸುಗುಣೈಕಪಕ್ಷರಾದಖಿಳಸಜ್ಜನರೆನ್ನ ।
ವಿಗುಣಕಾವ್ಯದೊಳಿರ್ಪ ದೋಷಂಗಳಂ ತಿದ್ದಿ ।
ಸುಗುಣಮೊಳ್ಳಿಷ್ಟ್ಯದೊರ್ಪಡಪನೆ ಪರ್ವತದಂತೆ ಗೈದಪರ್ ಕರುಣದಿಂದ ॥ ೮

ಕಬ್ಬಿಗಳ ಸರಣಿಯುನ್ನಱಿಯುದಪ್ರೌಢನಿಂ ।
ಕಬ್ಬರಚನೆಯುು ಪುಣ್ಯನೃಪಕಥಾಸಂಗದಿಂ ।
ದಬ್ಬರದಿ ಸಜ್ಜನರ ಮನಕೆ ಸಂತುಷ್ಟಿಯುಂ ತಂದಲ್ಲದಿರದೆಂಬುದು ॥
ಸಬ್ಬಜನರಿಂದಱಿಯುಬಹುದು ಸಕ್ಕರೆಯಿಂದ ।
ನಿಬ್ಬರದಿ ಕೂಡಿದಾಕೂಪಜಲಮಂ ರಸಿಕ ।
ರಾಬ್ಬಿದತಿಶರುಷದಿಂ ಕುಡಿಯುದಿರ್ಪರೆ ಪೇಳು ಕಬ್ಬಿಗರ ತಿಲಕರಿಂದು ॥ ೯

ಕನ್ನಡದ ಭಾಷೆಯಿದು ಸಂಸ್ಕೃತದ ಸೊಲ್ಲಿಂಗೆ ।
ಸನ್ನುತತ್ವದಿ ಸರಿಯು ಬಪ್ಪುದಲ್ಲೆಂದುಲಿವ ।
ರನ್ಯಗುಣದೂಷಕರ್ ತದ್ವ್ಯಯದ ಸಾರಮಂ ನನ್ನಿಯಿಂ ತಾವಱಿಯದೆ ॥
ಕನ್ನೆಯರ ಕಲ್ಮಷದ ಕಾಯುಮಂ ಬಣ್ಣಿಸುವ ।
ನನ್ಯಸಮಸಂಸ್ಕೃತದ ಸೊಲ್ಲು ಸಾಯುಜ್ಯಮಂ ।
ಮುನ್ನಾರಿಗಿತ್ತುದೈ ಕನ್ನಡದ ಹರಿನಾಮ ಕೈವಲ್ಯವನ್ನೀಯದೆ ॥ ೧೦

ದುಷ್ಟರಾದವರಿಂದು ಮಾತ್ಸರ್ಯಗುಣದಿಂದ ।
ಶಿಷ್ಟರ ಕವಿತ್ವಮಂ ಕೇಳದೆ ಕುಬುದ್ಧಿಯಿಂ ।
ತುಷ್ಟಿಸದೆ ಪೋದೊಡಾಸತ್ಕವಿತೆಗೇಂ ದೂಷಮಪ್ಪುದೇ ಧಾರಿಣಿಯೊಳು ॥
ದುಷ್ಟಘೂಕಂಗಳುಂ ಜಾರರುಂ ಚೋರರುಂ ।
ಕಷ್ಟನಿವನೆಮಗೆಂದು ಭುವನಜನಮೆಲ್ಲರ್ಗೆ ।
ತುಷ್ಟಿಪಡಿಸುವ ಕಮಲಬಾಂಧವನ ಬಯ್ದೊಡವಗೆಳ್ಳಷ್ಟು ದೋಷಮುಂಟೇ ॥ ೧೧

ಗೋಕರ್ಣಪತಿಶಯನ ಗೋರಾಶಿಜಾರಮಣ ।
ಗೋಕರ್ಣರಿಪುಗಮನ ಗೋಜಾತಸಮವದನ ।
ಗೋಕುಲೋಲ್ಲಸಿತಶುಭಗೋಕಮಲ ಗೋವಿಂದ ಗೋಕರ್ಣನಗರದೊಡೆಯ ॥
ಗೋಕುಲಾಧ್ಯಕ್ಷ ವರಗೋಪನರಹರಿಯೆನ್ನ ।
ಗೋಕುಲಂಗಳ ತಾನೆ ಗೋಪತಿಯು ನಲಿವಂತೆ ।
ಗೋಕುಶಲಿಗಳು ಕೇಳ್ದು ಪಮಳಿಪಂತೀಕಾವ್ಯರಚನೆಯಪ್ಪಂತೆ ಗೈವಂ ॥ ೧೨

ಇಂತು ಪೀಠಿಕಾ ಸಂಧಿ.

## ದ್ವಿತೀಯ ಸಂಧಿ.

ಸೂಚನೆ ॥ ಜಗಕೆ ಪಾವನವಾದ ನಳಯುಧಿಷ್ಠಿರರಂತೆ ।
ಸೊಗಸಿಂದ ರಾಜಿಸುವ ಕೃಷ್ಣರಾಜೇಂದ್ರಾಖ್ಯ ।
ಸುಗುಣ ಪುಣ್ಯಶ್ಲೋಕರಾಯನೈಶ್ವರ್ಯಮಂ ಕವಿಯು ನಿಜಸತಿಗೆ ಪೇಳ್ವಂ ॥

ಪರಮಪಾವನವಾದ ಹೇಮಾಪಗಾತಟದೊ ।
ಳರಿಹಿರಣ್ಯಕಶಿಪುವ ಸೀಳ್ದು ನರಹರಿ ಪೊರೆಯು ।
ತಿರುವ ಗೋಕರ್ಣಪುರವರದೊಳಗೆ ವಾಸಿಪ ಶ್ರೀವಾಸನೆಂಬಾತನು ॥
ನರಹರಿಗೆ ಪೊಡಮಟ್ಟು ಮಡದಿಮಕ್ಕಳಕೂಡಿ ।
ಕರುಣಿ ಕೃಷ್ಣೇಂದ್ರನೊಡ್ಡಂತಿಯುತ್ಸವವನತಿ ।
ಹರುಷದೊಳು ನೋಡಲ್ಕೆ ಪೊಱಮಟ್ಟು ಮಹಿಶೂರನಗರಮಂ ಸಾರ್ದನಾಗ ॥ ೧

ಬಾಳೇಂದುಶೇಖರಪ್ರಿಯಳಿಗಾನಂದದಿಂ ।
ದಾಲಯಂ ತಾನಾಗಿ ಪರಮಪಾವನ ತುಹಿನ ।
ಶೈಲದಂತಾರಾಜಿಸುತ ಸಕಲವಿಬುಧಜನಸಂಸೇವ್ಯವಾಗಿ ಪ-ತ್ತ ॥
ತಾಳೆದಾಳಿಂಬಗಳು ತಿಲಕತರುನಿಂಬಗಳು ।
ಬಾಚಿಹಲಸುದ್ರೋಣಬಕುಳಚಂಪಕಬಾಣ ।
ಸಾಲಂಗಳಿಂ ಮೆರೆವ ಚಾಮುಂಡಿಗಿರಿವರವ ನೀ ನೋಡು ಕಣ್ಣುದಿಲ್ಲಿ ॥ ೧

ಹರಿಹರಬ್ರಹ್ಮೇಂದ್ರವಹ್ನಿಯಮರಾಕ್ಷಸೇ ।
ಶ್ವರವರುಣವಾಯುಪೌಲಸ್ತ್ಯಪಂಕಜಮಿತ್ರ ।
ಹರಿಣಾಂಕರಂತಬ್ಜವಿಷಹಂಸವಿಬುಧಸದ್ರುಚಿಗಳಿಂ ಲಸಿತವಾಗಿ ॥
ವರವಹಿಷಪಾಲಾಶಶರನಿಚಯಸಾರಂಗ ।
ವರಪುಣ್ಯಜನಗೋಕದಂಬಲಕ್ಷಣಗಳಿಂ ।
ಗಿರಿ ವಿರಾಜಿಸುತಿರ್ಪುದೇನೆಂಬೆ ನೋಡು ನೀ ಪುರದ ತೆಂಕಣ ದೆಸೆಯೊಳು ॥ ೨

ದಿಟ್ಟಪರಿಗರ್ಧಚಂದ್ರಾಕೃತಿಯೊಳಿರ್ಪನ್ನ ।
ದಿಟ್ಟ ಕುಸುಮಾಸ್ತ್ರನಂ ಮದನ ಶಿವನೆದೆಗೆಸೆಯೆ ।
ತಟ್ಟನತ್ಯುಗ್ರದಿಂದದು ಶಿವನ ವಕ್ಷದೊಳ್ ನಾಂಟಿ ನಿಮಿಷಾರ್ಧದೊಳಗೆ ॥
ತಟ್ಟಾಗಿದು ತಲೆಯೊಳಗೆ ಪೊಜಟಿಂದುಪನಿಸಿತಾ ।
ನಟ್ಟಹಾಸದಿ ಮೆರೆಯೆ ಶಿವಸಾಂಬನಾದ ಗಡ ।
ದಿಟ್ಟಿಸಿ ನ್ನೋಟ್ಟೆಪೆಂದಗಸೆಗಳ್ ಗಗನಕಡಹಾಯ್ವಂತೆ ನಲಿವುದಿಲ್ಲಿ ॥ ೩

ಮುಚ್ಚಿಬಿಸಿಲುಗಾಳಿಗಳ ಬಾಧೆಗಳ ತಾ ತಾಳ್ದು ।
ಕಳವಳಿಸಿ ತಾಪದಿಂ ಬಂದ ದಾರಿಗರನ್ನು ।
ಸುಖದ ಮಾತ್ರದಿ ಛಾಯೆಯಿಂದ ವಿಶ್ರಮಗೊಳಿಸಿ ಕಲ್ಗಳಿಂ ಬಡಿಸಿಕೊಂಡು ॥
ಪುಳಿದೋರೆಕಾಯ್ಗಳಂ ಕೊಟ್ಟವರ ಹಸಿವನ್ನು ।
ಕಳೆದು ಸಜ್ಜನರಂತೆ ಪರಹಿತವ ಗೈವ ನವ ।
ತಳಿರಿಡಿದ ಮಾವುಗಳ್ ಫಲಪುಷ್ಪಭಾರದಿಂ ಮೆರೆವುದೀಗಿರಿವರನೊಳು ॥ ೪

ಚಿಕ್ಕತನದಲಿ ತನಗೆ ತಕ್ಕಷ್ಟು ನೀರ್ಗಳ ।
ನ್ನಕ್ಕರದಿ ಪೊಯ್ದು ಪರಿಪಾಲಿಸಿದರಿವರೆಂದು ।
ಸಕ್ಕರೆಗೆ ಸದೃಶವಾದೆಳನೀರುಗಳ ತಮ್ಮ ಶಿರದೊಳಗೆ ಪೊತ್ತುಕೊಂಡು ॥
ಉಕ್ಕಿದತಿಹರುಷದಿಂ ನಿಜಜೀವವಿರುವನಕ ।
ಕಕ್ಕುಲಿತೆಬಡದೆ ಕೊಡುತಿಪ್ಪ ತೆಂದೆಂಗುಗಳ್ ।
ಸೊಕ್ಕಿನಿಂ ಬೆಳೆದಿರ್ಪುವಿಲ್ಲಿ ಕೃತವನಂ ಮರೆಯದಿರುತಿರ್ಪ ಮನುಜರಂತೆ ॥ ೫

ಮೊಲ್ಲೆಮಲ್ಲಿಗೆಜಾಜಿ ಮುಗಮುಗಿಪ ವಾಸಂತಿ ।
ಸಲ್ಲಲಿತಕೇತಕಿಯು ಸುರಹೊನ್ನೆ ಮಾದಸಿಯು ।
ಫುಲ್ಲಸೇವಂತಿಗೆಯು ಪಾದರಿಯು ಕಣಿಗಿಲೆಯು ಪಾರಿಜಾತವು ಸಂಪಗೆ ॥
ಅಲ್ಲಲ್ಲಿ ರಾಜಿಸುವ ಸನ್ನಾಗಕೇಸರವು ।
ಚೆಲ್ಲಿಗಣ್ಣಾಳ್ ನೋಡು ಚಟುಲಸುರಗಿಯು ಬೀಡು ।
ಸೊಲ್ಲಿಗಳವಡದೆಂಬ ಸುಮತರುಲತಾಳಿಗಳ್ ನೊಂಪಿನಿಂದಿಲ್ಲಿರ್ಪುವು ॥ ೭

ಮಂದಮಾರುತನಟನು ಮಂದಗಮನದಿ ಬಂದು ।
ಚೆಂದದಿ ಲತಾಪಣ್ಯಸುಂದರಾಂಗಿಗಳನ್ನು ।
ನಿಂದು ವನಗರುಡಿಯೊಳ್ ಚೆಂದದಿಂ ನಟಯಿಸುವನೆಂದೆಂಬವೋಲ್ ನಟಿಸುವ ॥
ಇಂದುಧವಳಿತಕುಸುಮವೃಂದಸುಸ್ಮಿತದಿಂದ ।
ಬಂಧುರಸ್ತಬಕಕುಚದಿಂದಲುಂ ಜನಗಳಿಗೆ ।
ಚೆಂದಮಂ ತೋಱುಸುವ ಕುಂದಾದಿಲತೆಗಳಿಲ್ಲಿಂಬೆಂದು ಶೋಭಿಸುವುವು ॥ ೮

ವನಮಾಲೆಯಿಂ ಮಿಳಿತವಾಗಿ ನಗವನು ಪೊತ್ತು ।
ವಿನುತವಿಬುಧೋತ್ತಮರಿಗಾಶ್ರಿತಂ ತಾನಾಗಿ ।
ದನುಜಾರಿಯನ್ನು ಮತ್ತರ್ಜುನಾವೃತವೃಕೋದರಲಲಿತನೆನಿಸಿಕೊಂಡು ॥
ಘನನಕುಲಸಹದೇವಶೋಭಿತನುಮಾಗಿ ಯಮ ।
ತನುಜನಂ ಸಮಗೊಳಿಸಿ ಸಶಿವಶಂಕರನೆನಿಸಿ ।
ಯನುದಿನಂ ಶಶಿಕಾಂತರುಚಿಗುಹಾಶ್ರಿತಮಾಗಿ ರಮಣೀಯಗಿರಿ ಮೆಱ್ವುದು ॥ ೯

ಶುಕಶಾರಿಕಾನಿವಹಮಧುಮಧುರವಚನದಿಂ ।
ಪಿಕಪುಂಜಪರಿಪಠಿತಪಂಚಮಸ್ವರದಿಂದ ।
ಸುಕಲಷಟ್ಚರಣಗಳ ಸಂಗೀತರಾಗದಿಂ ಸೋಗೆಗಳ ಶಬ್ದದಿಂದ ॥
ಸುಕಪೋತಸಂತತಿಯ ಹೂಂಕಾರದಿಂದಲುಂ ।
ಸಕಲಸಿರಿಯಿಂದೆಸೆವ ಕೃಷ್ಣನೃಪನಿಲಯದಂ ।
ತಕಳಂಕಚಾಮುಂಡಿಗಿರಿವರವು ಸಲೆ ವಿರಾಜಿಸುತಿರ್ಪುದೇವೇೞ್ವೆನು ॥ ೧೦

ದಿವ್ಯದೇವಾಲಯದ ದರ್ಶನದಿ ಲೋಚನಕೆ ।
ಭವ್ಯತೀರ್ಥಂಗಳುದಪಾನದಿಂ ರಸನೆಗುಂ ।
ನವ್ಯಸುಮಗಂಧದಿಂ ನಾಸಿಕಕ್ಕನಿಲಸಂಸ್ಪರ್ಶದಿಂದಲು ಚರ್ಮಕೆ ॥
ಹವ್ಯಕವ್ಯಂಗಳಿಂ ದೇವಪಿತೃಪೂಜೆಯುಂ ।
ಹವ್ಯವಹದೊಳ್ ಗೈವ ಮುನಿಮನುಗಳಿಂ ಕಿವಿಗೆ ।
ಯವ್ಯಯಪ್ರೀತಿಯನ್ನಿಂತು ಪಂಚೇಂದ್ರಿಯಂಗಳ್ಗೀವುದೀಶಿಖರಿಯು ॥ ೧೧

ಭೋಗಿಶಯನಾಂಶನಾದೀಕೃಷ್ಣಭೂಪಾಲ ।
ನೀಗ ತಾನಾವಾಸವಾಗಿರಲ್ ವೇಳ್ಕೆಂದು ।
ಬೇಗದಿಂದೀಗಿರಿಯ ಬಡಗದೆಸೆ ಗೈದಿರ್ಪ ವಿಮಲದುಗ್ಧಾಬ್ಧಿಯಂತೆ ॥
ರಾಗದಿಂ ರಾಜಿಸುವುದೆಂದು ಪದ್ಮಾಕರಂ ।
ತ್ಯಾಗಿ ಕೃಷ್ಣೇಂದ್ರನಂತಖಿಳರಿಗೆ ಜೀವನವ ।
ಭೋಗಿಸಲು ಕೊಡುವುದಿದು ಕೃಷ್ಣನೃಪಮನದವೋಲ್ ಸ್ವಚ್ಛತರವಾಗಿರ್ಪುದು ॥ ೧೦

ಕೃಷ್ಣನೃಪಭುಜದಂತೆ ಭುವನಧಾರಣದಿಂದ ।
ಕೃಷ್ಣವಿಭುವಚನದಂತತಿಮಧುರರಸದಿಂದ ।
ಕೃಷ್ಣರಾಜಾಪಾಂಗದಂತೆ ಪದ್ಮಾಲಸಿತಲಾಸ್ಯದಿಂ ಶೋಭಿಸುವುದು ॥
ಕೃಷ್ಣನೃಪಸಭೆಯಂತೆ ಸುಕವಿಮಂಡಲದಿಂದ ।
ಕೃಷ್ಣನೃಪಮುಖದಂತೆ ಕಮಲಕಾಂತಿಗಳಿಂದ ।
ಕೃಷ್ಣರಾಜಾಧಿಪನ ಚಿತ್ತದಂತಾಮೋದದಿಂದ ಕೆರೆ ರಾಜಿಸುವುದು ॥ ೧೧

ಇಲ್ಲಿ ನೋಡೆಲೆ ಕಾಂತೆ ನಗರದೀಕೋಟೆಯಂ ।
ಸಲ್ಲಲಿತರತ್ನಮಯವಾದ ಬಾಗಿಲ್ಗಳಿಂ ।
ದಲ್ಲಲ್ಲಿ ರಾಜಿಸುವ ಕೊತ್ತಳಗಳಿಂದಲುಂ ಸಲೆ ವಿರಾಜಿಸುತಿರ್ಪುದು ॥
ನಲ್ಲೆ ಪದ್ಮೋದ್ಭವನು ಸೃಷ್ಟಿಸಿದ ಧರಣಿಯೊಳ ।
ಗೆಲ್ಲಿಯುಂ ಕಾಣೆ ನಾನಿದಱಗೞನಾಳಮಂ ।
ಬಲ್ಲವರು ಜಗದೊಳಗೆ ಶೇಷಕೂರ್ಮರು ಹೊಱತು ಮತ್ತೊರ್ವರಿಲ್ಲ ಕಾಂತೆ ॥ ೧೨

ಭೂದೇವತೆಯ ದಿವ್ಯಭುಜಲತೆಗಳಂತೆ ಸುಮ ।
ಮೋದಾನುರಂಜಿತಸುಕಸ್ತೂರಿಕಾಮಲಯ ।
ಜೋದಕಗಳಿಂದಲತಿಶೀತಳಂಗಳುಮಾದ ರಾಜಬೀದಿಗಳ ನೋಡು ॥
ಆದರದಿ ನಿಜರಮಣರೊಡಗೂಡಿ ಕೇಳಿಯಂ ।
ಸಾದಿಸಾಯಾಸಮಂ ಕಳೆಯಲೋಸುಗ ಲಲಿತ ।
ಸೌಧವಾತಾಯನದಿ ಮುಖಗಳಂ ಚಾಚಿರ್ಪ ನಾರಿಯರ ನೋಡು ಕಾಂತೆ ॥ ೧೩

ಈನಗರಮಧ್ಯದೊಳು ಸಲೆ ವಿರಾಜಿಸುತಿರ್ಪ ।
ಭೂನಾಥಕೃಷ್ಣರಾಜೇಂದ್ರನರಮನೆಯನ್ನು ।
ನಾನೆಂತು ಪೊಗಳುವೆನು ಶೇಷನಿಗುಮಸದಳಂ ನೋಡಿ ಸುರಪತಿ ದಣಿಯನು ॥
ಏನೆಂದು ಪೇಳುವೆನು ಮಂದಿರದ ಭಿತ್ತಿಯೊಳು ।
ತಾನೆ ಬಾಣಾಸುರಂ ಚಿತ್ರಮಂ ಬರೆದನೋ ।
ನೀ ನೋಡು ಮತ್ತೆರಡು ಕೈಯುಳ್ಳ ಜನರಿಂದಲಿದು ಬರೆಯಬಹುದೆ ರಮಣೀ ॥ ೧೪

ನವರತ್ನಕಾಂತಿಯಿಂ ಜಿತತಮನು ತಾನಾಗಿ ।
ನವಸುಧಾರೋಚಿಯಿಂ ಚಂದ್ರಿಕಾಯುತನಾಗಿ ।
ನವಕುಂಕುಮಾಸ್ತರಣದಿಂದಮಂಗಳನಾಗಿ ಸಭೆಯಿಂದ ಸಬುಧನಾಗಿ ॥
ನವಧನಗಳಿಂ ಯಕ್ಷಪತಿಗೃಹಕೆ ಗುರುವಾಗಿ ।
ನವಸರೋವರಗಳಿಂ ಕವಿವಿಲಾಸಿತವಾಗಿ ।
ನವಯುವತಿಜನರಿಂದ ಮಂಗಗತಿಯುತವಾಗಿ ಗೃಹ ನೃಪಗೆ ಸುಖಮೀವುದು ॥ ೧೭

ಕೈಲಾಸಗಿರಿಯಂತೆ ಶ್ರೀವೇದವಿಲಸಿತಂ ।
ಶ್ರೀಲಕ್ಷ್ಮಿಯುರಸನಾಲಯದಂತೆ ಹರಿಯುತಂ ।
ಪೌಲೋಮಿಯ ಪ್ರಿಯನ ಭವನದಂತಪ್ಸರೋಗಣಯುತಂ ಸತ್ಯದಂತೆ ॥
ಕಾಲತ್ರಯಂಗಳೊಳು ವೇದಗಾನೋಲ್ಲಸಿತ ।
ಮಾಲಲಿತವರುಣಮಂದಿರದಂತೆ ಬಹುರತ್ನ ।
ಜಾಲಸಂಶೋಭಿತಂ ತಾನೆಂದು ಕೃಷ್ಣರಾಜೇಂದ್ರನರಮನೆ ನಲಿವುದು ॥ ೧೮

ಭೋಗದಿಂದಿಂದ್ರನಂ ಸೌಮ್ಯದಿಂ ಚಂದ್ರನಂ ।
ತ್ಯಾಗದಿಂ ಶ್ರೀದನಂ ತೇಜದಿಂದರ್ಕನಂ ।
ರಾಗದಿಂ ಜಯಿಸಿರುವನೀರಾಜನೆಂದವರ ಭವನಂಗಳೊಂದುಗೂಡಿ ॥
ಈಗಲೀಯರಮನೆಯು ಚಂದದಿಂದೈದಿಯನು ।
ರಾಗದಿಂ ಶ್ರೀಕೃಷ್ಣರಾಜೇಂದ್ರಚಂದ್ರಂಗೆ ।
ಭೋಗಂಗಳನುದಿನಂ ಕೊಡುತಿರ್ಪುದೆಂಬಂತೆ ತೋಱುತಿದೆ ನೋಡು ಕಾಂತೆ ॥ ೧೯

ಈಮನೆಯೊಳುದ್ಯಾನಕಮಲಾಕರಂಗಳೊಳ ।
ಗೀಮಹಾವಿಭು ಗೈವ ದಾನೋದಕಂಗಳುಂ ।
ಸಾಮಜಘಟಾಕರಟಗಳಿತಮದಜಲಗಳುಂ ಚಂದ್ರಕಾಂತಂಗಳಿಂದ ॥
ಕಾಮಿನೀವದನೇಂದುದರ್ಶನೋದ್ಗಳಿತಮಾ ।
ದೀಮಹಾಜಲಗಳುಂ ಶ್ರೀಕೃಷ್ಣಭೂಪನಿ ।
ತ್ತಾಮಹಾಕನಕಮಂ ಪೊತ್ತೊಯ್ವರ ಸ್ವೇದವಾರಿಗಳ ತುಂಬಿರ್ಪುವು ॥ ೨೦

ಅಂದು ಹರಿ ನಿಜಜನನಿಗಾನಂದದಿಂ ಮುಖದಿ ।
ನಂದು ನಿಜಭಕ್ತನಾದರ್ಜುನಗೆ ಸಂಗರದಿ ।
ಸಂದೇಹವಿಲ್ಲದೇ ಬ್ರಹ್ಮಾಂಡಮಂ ತೋಱಿ ಬಂದೀಗಳೀಮನೆಯೊಳು ॥
ಚೆಂದದಿಂ ಶ್ರೀಕೃಷ್ಣರಾಜನವತಾರದಿಂ ।
ಸಂದಖಿಲಜನರಿಂಗೆ ಕೃಪೆಯಿಂದ ತೋಱಿಸುವ ।
ನೆಂದೆಲ್ಲರುಂ ಪೇಳ್ವ ತೆಱಗಿಂದ ಭಿತ್ತಿಗಳ ಚಿತ್ರಗಳು ಶೋಭಿಸುವುವು ॥ ೨೧

ಸುರವರರ ಮಹಿಮೆಗಳನಳವಟ್ಟ ಮಹಿಪತಿಯು ।
ಪರಮಪಾವನವಾದ ಮಂದಿರದ ವಿಭವಗಳ ।
ತರುಣಿ ನೀನೋಡಿದೆಯ ಕಣ್ತೆರೆನಂ ದಣಿವುವೇ ಮತ್ತೊಮ್ಮೆ ಬೇಗ ನೋಡು ॥
ತರಣಿಯುಸ್ತಾದ್ರಿಯಂ ಸಾರ್ದನದುಕಾರಣಂ ।
ಪುರದೊಳೆಲ್ಲಾದರಂ ಪೋಗಿಬಿಡದು ನಾಳೆ ನಾ ।
ವರಸನಾದೀಕೃಷ್ಣರಾಜನೊಡ್ಡಂತಿಯುನ್ನುದಯದೊಳ್ ನೋಳ್ಪೆವೇಳು ॥ ೨೨

ಎಂದು ನಿಜಸತಿಸುತರನೊಡಗೊಂಡು ಕೆರೆಯೊಳಗೆ ।
ಬಂದು ಸಂಧ್ಯಾದಿಗಳ ಗೈದು ಸಂತೋಷದಿಂ ।
ನಂದನರುಸಹಿತ ರುಚಿಭೋಜನವ ಮಾಡಿ ನಿಜಸತಿರಚಿತಶಯನದಲ್ಲಿ ॥
ಇಂದೀನೃಪಾಲಕನ ಸಂಪದಾಲೋಕನವ ।
ಚೆಂದದಿಂ ಗೋಕರ್ಣನಗರನರಹರಿಯಿತ್ತ ।
ನೆಂದಾತನಂ ಮನದೊಳಿಟ್ಟು ಮಲಗಿದನಂದು ಕವಿಯು ನಿಜತನಯರೊಡನೆ ॥ ೨೩

ಇಂತು ದ್ವಿತೀಯಸಂಧಿ.

## ತೃತೀಯ ಸಂಧಿ.

ಸೂಚನೆ ॥ ಸಾಧುಜನರಂ ಪೊರೆಯಲೋಸುಗಂ ದುಷ್ಟರಂ ।
ಬಾಧಿಸಲು ಸದ್ಧರ್ಮಸಂತತಿಯ ನಿಲಿಸಲುಂ ।
ಶ್ರೀಧರಾಂಶದೊಳುದಿಸಿದೀಕೃಷ್ಣಭೂಪನೊಡ್ಡಂತಿಯಂ ಬಣ್ಣಿಸಿದನು ॥

ಗುರುತಲ್ಪಗಾಮಿ ದೋಷಾಕರಂ ಮಿತ್ರನ ।
ತ್ತುರಕಾಂತಿಯೊಳ್ ಖಿನ್ನನಾಗುವೆಂ ನಟಜಟಾ ।
ವರಣಜಲದೊಳ್ ಪೊರಳುತಿರುವೆ ಸಕಳಂಕತನು ಬುಧಶತ್ರುವಾಗಿರ್ಪೆನು ॥
ಪರಮಜಡರಾತ್ರಿಚರನಾಗಿರುವೆನದಱಿಂದ ।
ಸುರರಾಜಸದೃಶನಾದೀಕೃಷ್ಣರಾಜನೃಪ ।
ವರನ ಪರಮೋತ್ಸವದ ದರುಶನಕೆ ಪುಣ್ಯವೆನಗಿಲ್ಲೆಂದು ಶಶಿ ತೊಲಗಿದಂ ॥ ೧

ಧರಣಿಯೊಳು ದುಷ್ಟರನ್ನಡಗಿಸುತ ಸದ್ವ್ಯೂಹ ।
ಸರಣಿಯಂ ಪಾಲಿಸುತ ವಿಷ್ಣುಪದಭಕ್ತನಾ ।
ಗಿರುತ ಜಗದೊಳ್ ತಮಸ್ಸುಗಳನಪಹರಿಸುತ್ತ ತನ್ನಂತೆ ರಾಜಿಸುವನು ॥
ಕರುಣಾರಸಾರ್ದ್ರನುಂ ಶಾಂತನುಂ ಶಿತಯಶೋ ।
ವರ ಚಂದ್ರಿಕಾಲಲಿತನಾಗಿರ್ಪನದ್ಭುತಂ ।
ಸರಿಯೆಂದು ಸೂರ್ಯನೀಕೃಷ್ಣನೃಪನುತ್ಸವವ ನೋಡಲೈತಂದನಾಗ ॥ ೨

ವರಪುಣ್ಯಜನವೈರಿ ಪುರುಹೂತನಗ್ನಿಯುಂ ।
ನಿರುತಮಾಶ್ರಿತತತಿಯ ತಿಂಬನೀಸಮವರ್ತಿ ।
ವರದಕ್ಷಿಣಾಶೆಯೊಳ್ಪ್ರಯುನೀತ ರಾಕ್ಷಸಂ ವರುಣನೋ ಜಡನಿಲಯನು ॥
ಮರುತನಿವ ರಂಧ್ರವಂ ಹುಡುಕುವಂ ಶಿವಸಖನು ।
ಪರಧನಾಸಕ್ತನೀಶಂ ವಿರೂಪಾಕ್ಷನೀ ।
ಧರಣಿಪಾಲಕಗಿವರು ಗುಣದಿ ಸರಿಯಲ್ಲೆನುತಲೊದಱಿದವು ವಾದ್ಯಂಗಳು ॥

ಇಷ್ಟುವರುಷಗಳಿಂದ ಭೂಲೋಕದೊಳು ಮೆಱೆವ ।
ಕೃಷ್ಣಭೂಪಾಲನದಱಿಂದಲಿಲ್ಲಿರ್ಪವರು ।
ತುಷ್ಟಿಯಿಂ ನಿನ್ನ ಲೋಕನಿವಾಸದಾಸೆಯಂ ಬಿಟ್ಟು ಸುಖವಿರ್ಪರೆಂದು ॥
ವಿಷ್ಣುವಿಗೆ ಪೇಳಲೋಸುಗ ಬಹಳಘೋಷದಿಂ ।
ನಟ್ಟಿಹಾಸಂಖ್ಯೆಯ ಗುಂಪುಗಳ ಜನರು ಕಿವಿ ।
ಗೊಟ್ಟೆಣಿಸುತೆಚ್ಚತ್ತು ಕೃಷ್ಣನೃಪವರ್ಧಂತಿಯಂ ನೋಡಲನುವಾದರು ॥

ಗರುಡವಾಹನ ಹರಿಯೆ ನಿನ್ನಂಶಜಾತನಾ ।
ಗಿರುವ ಕೃಷ್ಣೇಂದ್ರವರ್ಧಂತಿಯಂ ನೀ ನೋಡ ।
ದಿರಬಹುದೆ ಬೇಗದಿಂ ತಲ್ಪದಿಂದೇಳೆಂದು ಭೇರೀನಿನಾದಂಗಳು ॥
ಪರಮಸಂತೋಷದಿಂ ಹರಿಯನೆಬ್ಬಿಸಲಿಕ್ಕೆ ।
ಪರಮಪದವನ್ನಡರಲೋಸುಗಂ ಬ್ರಹ್ಮಾಂಡ ।
ವರಕಟಾಹವನೀಗಳೊಡೆಯುತಿವೆಯೆಂಬಂತೆ ಸರ್ವರಿಗೆ ಕೇಳಿಸಿದುವು ॥

ಆಗಲೀಕವಿಯೆದ್ದು ಸತಿಯನೆಬ್ಬಿಸಿ ತಾನು ।
ಬೇಗ ಸಂಧ್ಯಾದಿಗಳನಾಚರಿಸಿ ಶುಚಿಯಾಗಿ ।
ಸಾಗರಾಲಯ ಹರಿಯ ಪೂಜೆಯಂಗೈದು ನಿಜಸತಿಸುತರ ಕೂಡಿಕೊಂಡು ॥
ತ್ಯಾಗಭೂಷಿತಕೃಷ್ಣರಾಜೇಂದ್ರನುತ್ಸವವ ।
ರಾಗದಿಂ ನೋಳ್ಪೆನೆಂದತಿಕುತೂಹಲಭರಿತ ।
ನಾಗಿ ಪೊಱಮಟ್ಟು ಶುಭಲಕ್ಷಣಗಳಿಂದೆಸೆವ ಬೀದಿಯೊಳ್ ಬರುತಿರ್ದನು ॥

ಗಂಗಮ್ಮ ನೀನೇಳು ರಂಗನಾಯಕಿ ಬಾರೆ ।
ನಿಂಗಮ್ಮ ಬರುವೆಯೋ ಸಾವಿತ್ರಿ ತಡವೇಕೆ ।
ಸಿಂಗಮ್ಮ ನಿಮ್ಮತ್ತೆ ಯೇಕೆ ಬರಲಿಲ್ಲವೇ ಗೌರಿ ನೀನೆಲ್ಲಿ ಪೋಪೆ ॥
ತಂಗಿ ಜಡೆಗಟ್ಟುವೆನು ಬೇಗೇಳು ಭಾಗಮ್ಮ ।
ಸಿಂಗರಿಸಿಕೊಳ್ಳು ಮಲವೇಲುಮಂಗಮ್ಮ ನೀಂ ।
ಮಂಗಳಸ್ನಾನವಂ ಗೈಯೆಂಬ ಮುತ್ತೈದೆಯರ ಕೂಗ ಕಾಂತೆ ಕೇಳು ॥

ಬಾಯೊಳೊಂದಾದರುಂ ಹಲ್ಲಿಲ್ಲದಗಿಯುವರ |
ನಾಯಾಸದಿಂದಲ್ಲಿಗಲ್ಲಿ ನಡುವೆತ್ತುವರ |
ಞಾಯುವಂ ನಡುಗಿಸುತ ಕೋಲೂರಿ ನಡೆವವರ ಬಿಳುದಲೆಯ ಕಟ್ಟುವರನು ||
ರಾಯನಿಗೆ ಗೋಧಿಕಲ್ಲೆಣ್ಣೆ ಶಾಸ್ತ್ರಂಗಳಂ |
ಗೈಯುಲೋಸುಗ ತಮ್ಮ ಮಱಿಮಕ್ಕಳೊಡನೆ ಸುನಿ |
ಛಾಯದಿಂದೈತಪ್ಪ ವೃದ್ಧಮುತ್ತೈದೆಯರ ತಂಡವಂ ನೋಡು ಕಾಂತೆ || ೮

ಲಸದೂರ್ಧ್ವಪುಂಡ್ರಂಗಳಂ ಧರಿಸಿ ಮಲ್ಲಿಕಾ |
ಕುಸುಮಮಾಲಿಗಳನ್ನು ಜುಟ್ಟಿಗಳವಡಿಸುತ್ತ |
ಬಿಸತಂತುಸದೃಶವಹ ಯಜ್ಞಸೂತ್ರಂಗಳಂ ಪದ್ಮಾಕ್ಷಮಾಲೆಯಿಂದ ||
ವಸನದ್ವಯಂಗಳಂ ಶಂಖಚಕ್ರಾಂಕನವಿ |
ಲಸಿತಭುಜಯುಗಳದಿಂ ನಿತ್ಯಸೂರಿಗಳಂತೆ |
ವಸುದೇವಸುತಸದೃಶಕೃಷ್ಣನೃಪನೋಲೈಸಲೈದುವರು ನೋಡು ಕಾಂತೆ || ೯

ಫಾಲದೊಳು ಭಸ್ಮತ್ರಿಪುಂಡ್ರಭೂಷಿತರಾಗಿ |
ಚೇಲಂಗಳನ್ನುಟ್ಟು ರುದ್ರಾಕ್ಷಮಾಲೆಗಳ |
ಲೀಲೆಯಿಂ ಕಂಠಪ್ರದೇಶದೊಳಗಳವಡಿಸಿ ಸುಫಲಮಂತ್ರಾಕ್ಷತೆಗಳ ||
ಲೋಲಕರತಳದೊಳಗೆ ಧರಿಸಿ ಬಹುವೇಗದಿಂ |
ಶೀಲಕೃಷ್ಣೇಂದ್ರನೃಪನುತ್ಸವವ ನೋಡಲ್ಕೆ |
ಶೀಲೆ ಬರುವೀಸ್ಮಾರ್ತಸದ್ವಿಜರ ತಂಡವಂ ನೋಡಿ ನೀ ಧನ್ಯಳಾಗು || ೧೦

ದಿವ್ಯಮುದ್ರಿಕೆಯಿಂದಲೂರ್ಧ್ವಪುಂಡ್ರಂಗಳಂ |
ದಿವ್ಯಮುದ್ರೆಗಳನ್ನು ಫಾಲ ಕಾಯಂಗಳೊಳ್ |
ದಿವ್ಯತುಲಸೀಮಣಿಯ ಮಾಲಿಕೆಗಳನ್ನು ನಿಜಕಂಠದೊಳ್ ಧರಿಸಿಕೊಂಡು ||
ಭವ್ಯಮಂತ್ರಾಕ್ಷತೆಯ ಫಲಸಹಿತ ಕೈಕೊಂಡು |
ಭವ್ಯಭೂಪಾಲಕನ ವರ್ಷದೊಡ್ಡಂತಿಯ |
ನ್ನವ್ಯಯಪ್ರೀತಿಯಿಂ ನೋಡಲ್ಕೆ ಬರುವರೀವೈಷ್ಣವಶ್ರೇಷ್ಠರಲ್ಲಿ || ೧೧

ನವರತ್ನಖಚಿತಮಾದಾಭರಣಜಾಲಮಂ |
ನವದುಕೂಲಂಗಳನ್ನುಷ್ಣೀಶಶಾಲುಗಳ |
ನವಸರದಿ ಕಾಯದೊಳ್ ತೊಟ್ಟುಟ್ಟು ಶಸ್ತ್ರಾಸ್ತ್ರನಿಕರಮಂ ಪಿಡಿದುಕೊಂಡು ||
ಭುವನೈಕಮಾನ್ಯಕೃಷ್ಣೇಂದ್ರನೊಡ್ಡಂತಿಯು |
ತ್ಸವದೊಳಗೆ ಕಾಣಿಕೆಯನಿತ್ತು ಪೊಡೆಮಡಲೀಗ |
ಭವನದಿಂ ಪೊಱಡುಪೀಕ್ಷತ್ರಿಯರ ಸಂಭ್ರಮವ ನೀನಿತ್ತ ನೋಡು ಕಾಂತೆ || ೧೨

ಬಗೆಬಗೆಯ ರತ್ನಗಳ ಭಂಗಾರಹೊನ್ನುಗಳ ।
ಬಗೆಬಗೆಯ ಮುತ್ತಿನ ತುರಾಯಿಗಳ ಹಾರಗಳ ।
ಬಗೆಬಗೆಯ ವಸ್ತ್ರಗಳ ಬಹುವಸ್ತುಜಾಲಗಳ ಬಗೆಬಗೆಯ ಕುಂಡಲಗಳ ॥
ಬಗೆಬಗೆಯ ಗಜಗಳಂ ಕುದುರೆಗಳ ಮುಱಿಗಳಂ ।
ಸೊಗಸಿಂದ ಶೋಭಿಪ್ರೊಡ್ವಂತಿಯುತ್ಸವದೊಳಗೆ ।
ಸುಗುಣಕೃಷ್ಣೇಂದ್ರಂಗೆ ಕೊಟ್ಟು ಕಾಣ್ಕೆಗಳಲೀವೈಶ್ವರ್ಯದವರು ನೋಡು ॥ ೧೨

ಪರಿಪರಿಯ ಧಾನ್ಯಗಳ ಪೊತ್ತಿರುವ ಯೆತ್ತುಗಳ ।
ತರತರದ ಫಲಗಳಂ ತುಂಬಿರುವ ಭಂಡಿಗಳ ।
ಸುರಪುರದ ಸುರಭಿಸುಮಧೇನುಗಳ ಜೋಱಿಗಳ ಕೋಣಗಳ ತಗರುಗಳನು ॥
ಪರಿಪರಿಯ ಕಾಳಗವ ಕಲಿತ ಹಕ್ಕಿಗಳನ್ನು ।
ಧರಣೀಶಮೌಳಿಮಣಿ ಕೃಷ್ಣರಾಜೇಂದ್ರಂಗೆ ।
ವರುಪದೊಡ್ವಂತಿಯೊಳ್ ಕೊಟ್ಟು ನಮಿಸಲ್ಬರುವ ಶೂದ್ರರಂ ನೋಡು ಕಾಂತೆ ॥ ೧೩

ಸಂಚರಿಪ ಸುರತರುವೊ ಸುಕುಮಾರಸುರಮಣಿಯೊ ।
ಮಿಂಚುಸಿಡಿಲುಗಳ್ಕೂಡಿರ್ಪ ಸನ್ಮೇಘವೋ ।
ಪಂಚಪಾಂಡವರಲ್ಲಿ ಪ್ರಿಯನಾದ ಕರ್ಣನೋ ಸುಜ್ಞಾನಸುರಧೇನುವೋ ॥
ಅಂಚೆ ವಾಹನವಾದ ಬೊಮ್ಮನೀನ್ನೃಪನಂ ಪ್ರ ।
ಪಂಚದ ಪರಿದ್ರರಂ ಪೊರೆಯಲೇ ನಿರ್ಮಿಸಿದ ।
ಚಂಚಲತ್ವವ ಬಿಟ್ಟು ಬನ್ನಿರೆಂದೆನ್ನುತ್ತ ಬರುವ ಯಾಚಕರ ನೋಡು ॥ ೧೪

ತ್ರಿಜಗದಧಿಪತಿಯಾದ ಶಕ್ರಸೀಧರಣಿಯಂ ।
ಕುಜನರಾಕ್ರಮಿಸಿರ್ಪರವರ ಶಿಕ್ಷಿಸಿ ತಾನು ।
ಸುಜನರಂ ಪಾಲಿಸುವೆನೆಂದು ಸಂತೋಷದಿಂ ಕೃಷ್ಣೇಂದ್ರರೂಪನಾಗಿ ॥
ಪ್ರಜೆಗಳಂ ಪಾಲಿಸುವನೆನುತಿಲ್ಲಿಗಪ್ಪರೋ ।
ವ್ರಜವ್ಯೃದಿತೋ ಎಂಬ ತೇಜದಿಂದಲರಮನೆಗೆ ।
ಸುಜನರಕ್ಷಕ ಕೃಷ್ಣರಾಜನನ್ನೋಲೈಸೆ ಪ್ರೋಪ ಗಣಿಕೆಯರ ನೋಡು ॥ ೧೫

ಇಂತು ಬರುತಿರುವ ಜನಸಂಪಣಿಯ ನೋಡುತ್ತ ।
ಕಂತುಸಮವಿಗ್ರಹನರೇಂದ್ರನಂ ನೋಡಲ್ಕೆ ।
ಸಂತಸದೊಳಾಸ್ಥಾನಮಂಟಪಕ್ಕೈದಿದಂ ಸತಿಸುತರ್ಸಹಿತ ಕವಿಯು ॥
ಕುಂತಖಡ್ಗಾದಿದಿವ್ಯಾಯುಧಗಳಂ ಧರಿಸಿ ।
ನಿಂತಿರುವ ಭಟರ ಪಟುರವಗಳಂ ಕೇಳುತ್ತ ।
ಅಂತರಿಸಿ ನಿಂತಲ್ಲಿಯೇ ನೋಳ್ಪುವೀನ್ನೃಪನನೆಂದು ನಿಜಸತಿಗೆ ಪೇಳ್ದಂ ॥ ೧೬

ಸಾಕೇತಪುರದ ದಿವ್ಯಾಸ್ಥಾನವುಂಟಪದಿ ।
ಭೂಕಾಂತ ರಾಮನೊಡ್ಡೋಲಗಂಗೊಡುವಂತೆ ।
ಲೋಕೇಶ್ವರಾಂಶದೊಳ್ಪುಟ್ಟಿದೀ ಕೃಷ್ಣರಾಜೋತ್ತಮಂ ರಾಜಿಸುವನು ॥
ಈಕೃಷ್ಣರಾಜನಂ ನೋಡದವರಿಗೆ ಕಣ್ಣ ।
ನೇಕೆ ವಿಧಿ ಸೃಷ್ಟಿಸಿದನೋ ವೃಥಾಯಾಸದಿಂ ।
ಸಾಕೆಮ್ಮ ಕಣ್ಣುಗಳ್ ಸಫಲಮಾದುವು ಕಾಂತೆ ನಾವೇ ಕೃತಾರ್ಥರೆಂದು ॥ ೧೮

ಅಂದು ಹರಿಯುಂಗುಟದಿ ಗಂಗೆ ಪುಟ್ಟಿದ ತೆಱದೊ ।
ಳಿಂದು ನಖಕಾಂತಿಯೆಂಬಮರಗಂಗೆಯು ನೃಪನ ।
ಚೆಂದವಾದಂಗುಲಿಗಳಿಂ ಪೊಱಡುತಿದೆ ನೋಡು ಕಾಂತೆಯೀಗಂಗೆಯಲ್ಲಿ ॥
ಸುಂದರಾಕೃತಿಯಿಂದ ಶೋಭಿಸುವ ಜಲರುಹಗ ।
ಳೆಂದು ಜನರೆಂಬಂತೆ ಪದಗಳಾರಾಜಿಪುವು ।
ಕುಂದಸಸ್ಮಿತೆ ನೋಡು ಕೃಷ್ಣಭೂಪಾಲಕನ ಸೊಬಗೆಂತು ಬಣ್ಣಿಸುವೆನು ॥ ೧೯

ಈನದಿಯ ಸಂಗವುದಿ ಶೋಭಿಸ ಸರಸ್ವತಿಯೊ ।
ನೀ ನೋಡು ನಮಿಪ ಸಾಮಂತರಾಜೋತ್ತಮರ ।
ಭಾನುಕಿರಣೋಜ್ಜ್ವಲಿತಮೌಳಿರತ್ನಪ್ರಭಾಜಾಲಮಂ ಕಣ್ಮಿಟ್ಟದೇ ॥
ಈನದೀತ್ರಯದೊಳಗೆ ಕೂಡಿರಲ್ಬೇಕೆಂದು ।
ಭಾನುತನುಜಾತೆ ಬಂದಿರುವಳೋ ಎಂಬಂತೆ ।
ಯೀನೀಲಮಣಿಪಾದಪೀಠಕಾಂತಿಗಳೀಗ ಪಸರಿಸುವುದಿಲ್ಲಿ ನೋಡು ॥ ೨೦

ಪಾವನತರಂಗಳಾದೀನದೀತ್ರಯಗಳೀ ।
ಪಾವನಾಕೃತಿಯಾದ ಕೃಷ್ಣರಾಜಾಂಘ್ರಿಯೊಳ್ ।
ತಾವು ನೆಲೆಯಾಗಿರ್ಪವೆಂದು ಕನಕಾಪಗೆಯು ಕೌತುಕದಿ ನೋಡಲೀಗ ॥
ಶ್ರೀವಿಲಾಸಿತವಾದ ನೃಪನ ಕಟಿತಟದಿಂದ ।
ತಾ ವಿನೋದದಿ ಕಾಲ ವರೆಗಿಱಿವು ಶೋಭಿಪುದೊ ।
ಭಾವಿಸುತ ನೋಡು ಕೃಷ್ಣೇಂದ್ರನೃಪನುಟ್ಟ ಕನಕಾಂಬರದ ಕಾಂತಿಯನ್ನು ॥ ೨೧

ಭೋಗವಿಲಸಿತನಾಗಿ ಬಹುರತ್ನಚಯದಿಯಾ ।
ನಾಗಲುಂ ಶೋಭಿಸುತ ಶಾರ್ಙ್ಗಪಾಣಿಯು ಭಕ್ತ ।
ನಾಗಿ ಭೂಭಾರವಂ ತನ್ನಂತೆ ಕೃಷ್ಣನೃಪ ಧರಿಸಿರ್ಪನೆಂದು ಕೇಳೆ ॥
ಭೋಗೀಶನ್ನೆತಂದು ಭೂಪನಂ ತಕ್ಕೈಸೆ ।
ಬೀಗ ಕನಕಾಂಬರದ ಕಾಂತಿಯಿಂ ಹೊಂಬಣ್ಣ ।
ನಾಗಿರುವನೆಂಬಂತೆ ರಾಜಿಸುವ ಚಿನ್ನದೀನೇವಣವ ನೋಡು ಕಾಂತೆ ॥ ೨೨

ನವರತ್ನಖಚಿತವಾದಂಗಿಯುನ್ನಳವಟ್ಟು ।
ಕುವಲಯದಳಶ್ಯಾಮಕೃಷ್ಣಭೂಪಾಲಕಂ ।
ಕುವಲಯಪ್ರಿಯನಾಗಿ ರತ್ನಭುಜಭಾಪುರಿಗಳಂ ತೊಟ್ಟು ಶೋಭಿಸುವನು ॥
ಭುವನಜನರಿಗೆ ಕೊಡುವ ದಾನಜಲದೂರ್ವಿಕೆಗ ।
ಳಿವು ಹಸ್ತಭೂಷಣಗಳಾಗಿರ್ಪ ನೃಪನ ಪ ।
ಲ್ಲವಪಾಣಿಯಿಂ ರತ್ನದೂರ್ವಿಕೆಗಳಾರಾಜಿಸುವುವು ನೀ ನೋಡು ಕಾಂತೆ ॥ ೨೩

ಕಸ್ತೂರಿಯು ತಿಲಕದ ಕಳಂಕಿನಿಂದಧರದ ।
ತ್ಯುತ್ತಮಸುಧಾರಸದ ಶೋಭೆಯಿಂ ಸರ್ವದಾ ।
ಬಿತ್ತರದಿ ರಾಜಿಸುವ ಸಕಲಸತ್ಕಳೆಗಳಿಂ ರಾರಾಜಮಾನವಾದ ॥
ಚಿತ್ತಜಾಕೃತಿಯಿಂದ ಶೋಭಿಸುವ ಕೃಷ್ಣರಾ ।
ಜೋತ್ತಮನ ವದನೇಂದುಬಿಂಬವನ್ನೋಲೈಸ ।
ಲಿತ್ತ ಬಂದುಡುಮಾಲೆಯೆಂಬಂತೆ ಮುತ್ತುಗಳ ಹಾರಗಳು ರಾಜಿಸುತ್ತಿವೆ ॥ ೨೪

ಮಗನಿಗೆ ಸಹಾಯಮಂ ಮಾಡಬೇಕೆಂತೆಂದು ।
ಜಗದೀಶನಾದಿಂದ್ರನಾಗ ನಗರಿಯು ಪೊಕ್ಕು ।
ಸುಗುಣಿ ಕರ್ಣನ ಬೇಡಿತಂದು ನಿಜಕಾರ್ಯಮಂ ಸಂತಸದಿ ಮಾಡಿಕೊಂಡು ॥
ಜಗದ ಜನರೆಲ್ಲರುಂ ಮೆಚ್ಚುವಂತೀಚರಮ ।
ಯುಗಕರ್ಣನೆನಿಸಿಕೊಂಡಿರುವ ಕೃಷ್ಣೇಂದ್ರನೃಪ ।
ನಿಗೆ ಕೊಟ್ಟನೆಂಬಂತೆ ರತ್ನಮಯಕುಂಡಲಗಳಾರಾಜಿಸುವುವು ನೋಡು ॥ ೨೫

ಅಂದು ಘನವೃಷ್ಟಿಯಿಂ ಗೋಪರಂ ಪಾಲಿಸಲು ।
ನಿಂದು ಗೋವರ್ಧನಾಚಲವ ಮಧುಸೂದನಂ ।
ಚೆಂದದಿಂ ಪೊತ್ತವೊಲ್ಕೃಷ್ಣರಾಜೋತ್ತಮಂ ನವರತ್ನಮಕುಟವನ್ನು ॥
ಸುಂದರಶಿರಸ್ಸಿನೊಳು ಧರಿಸಿ ಭೂಮಿಯ ಜನರ ।
ನಂದದಿಂ ಪಾಲಿಸುವನೀನೃಪೋತ್ತಮನ ಶುಭ ।
ಸಂದರ್ಶನಂ ಪುಣ್ಯಶಾಲಿಗಳಿಗಲ್ಲದೇ ಮಿಕ್ಕವರಿಗೇಂ ದೊರೆಗುಮೇ ॥ ೨೬

ನವರತ್ನಖಚಿತಮಕುಟಾಗ್ರದೊಳ್ವಿಭ್ರಾಜಿ ।
ಸುವ ಸೂರ್ತಿಮುತ್ತಿನ ತುರಾಯಿಗಳ ಕಾಂತಿಗ ।
ಳ್ತಿವೆ ಗುಂಪುಗೂಡಿ ಮೇಲ್ಕುಂಡಲಾಕೃತಿಯಿಂದ ರಾಜಿಸುವುವೆಂಬ ತೆರದಿ ॥
ಕವಿಕಲ್ಪತರುಕೃಷ್ಣನೃಪನ ಮೇಲ್ಭಾಗದೊಳ್ ।
ಸುವಿಶಾಲವಾಗಿ ಶೋಭಿಸುವ ಧವಳಾತಪ ।
ತ್ರವ ನೋಡು ಕಾಂತೆ ನೀರಾಕೇಂದುಬಿಂಬದಾಕಾರವಾಗಿರ್ಪುದಿಲ್ಲಿ ॥ ೨೭

ಸುರರು ಪೂಮಳೆಗಳಂ ಕೃಷ್ಣರಾಜೋತ್ತಮನ |
ವರಶಿರೋಭಾಗದೊಳ್ ಪರಮಸಂತೋಷದಿಂ |
ಸುರಿಯಲವು ಮಕುಟದೊಳ್ ಬಿದ್ದೆರಡುಪಾಲಾಗಿ ವ್ಯಜನಗಳ ಗಾಳಿಯಿಂದ ||
ಪರಿದು ಮೇಲ್ಭಾಗಕ್ಕೆ ಪೋಪುವೆಂಬಂತೆ ವರ |
ತರುಣಿಯರ್ಕರಗಳಿಂ ಢಾಳಿಸುತ್ತಿರುವ ಶಿತ
ತರಚಾಮರದ್ವಯಂ ಶೋಭಿಸುವುದೀಗಲಿದ ಬೇಗದಿಂ ಕಾಂತೆ ನೋಡು || ೨೮

ಈಮಹಾದುಃಖಸಂಸಾರದೊಳ್ ಬಿದ್ದ ಜನ |
ರಾಮಹಾಭೃತ್ಯ ಹರಿಯೋಗಿ ಪೇಳ್ದ ತೆಜದೊ |
ಳೀಮಹಾವಿಭು ಕೃಷ್ಣಭೂಪನೇ ಪ್ರಭು ವಿಷ್ಣು ಭಾವಜ್ಞ ಸಿಲೋರ್ಭನು ||
ಶ್ರೀಮಹಿಷನಗರದೊಳು ಸಲೆ ವಿರಾಜಿಪನೀತ |
ನೇ ಮಹಾಸಾರಮಾದಾಶ್ರಯಂ ತಮಗೆಂದು |
ಕಾಮಿತವನೀವ ಕೃಷ್ಣೇಂದ್ರಭೂಪಾಲನನ್ನೋಲೈಪರಿಲ್ಲಿ ನೋಡು || ೨೯

ಶ್ರೀಕೃಷ್ಣಭೂಪನೇ ಶೂರನುಂ ಧೀರನುಂ |
ಶ್ರೀಕೃಷ್ಣಭೂಪನೇ ತ್ಯಾಗಿಯುಂ ಭೋಗಿಯುಂ |
ಶ್ರೀಕೃಷ್ಣಭೂಪನೇ ದುಷ್ಟನಿಕ್ಷಕಶಿಷ್ಟಪಾಲಕಂ ಕರುಣಾಬ್ಧಿಯು ||
ಶ್ರೀಕೃಷ್ಣಭೂಪನಂ ಪೋಲ್ವರಾರುಂಟಿಳೆಯೊ |
ಳೀಕೃಷ್ಣಭೂಪನೇ ದೀನಸಂತತಿಗೆ ಸ |
ಪ್ರೋರ್ತ್ಕೃಷ್ಟದಾಯಕನುಯೆಂದೆನುತ ವಂದಿಗಳ್ ಸ್ತುತಿಸುವರ್ ಕೇಳು ಕಾಂತೆ|| ೩೦

ಪಟುಪಡಿಂಡಿಮಢಕ್ಕೆಕಹಳೆನವಪತ್ತುಗಳ್ |
ಸ್ಫುಟಗಳಾದಿಂಗ್ಲೀಷುವಾದ್ಯಗಳ ಸಾಲುಗಳ್ |
ಪಟುವಾದ ಬಾರುತಂಬೂರಿತುತ್ತೂರಿಗಳ್ ಭೇರಿನಿಸ್ಸಾಣಂಗಳು ||
ಕಠಿನದುಂದುಭಿಡಮರುತಾಳಮದ್ದಳೆಗಳುಂ |
ಚಟುಲಮಾದೋಲಗಗಳುಂ ಕೂಡಿ ಸಕಲದಿ |
ಕ್ತಟಗಳೊಳ್ ಮೊಳಗುತಿವೆ ಕುಟಿಲಕುಂತಳೆ ಕೇಳು ಸೇನೆವುಗಳಲ್ಲಿ ಕೇಳ್ಕೊ || ೩೧

ಶೋಭನಾನ್ವಿತನಾದ ಕೃಷ್ಣರಾಜೇಂದ್ರಂಗೆ |
ಶೋಭನವ ಪಾಡಿಯಾರತಿಯನೆತ್ತುವರನ್ನು |
ಶೋಭನಾಕ್ಷತೆಕುಸುಮಫಲಗಳಂ ಕೊಡುವರಂ ನಜರಿತ್ತು ನಮಿಸುವರನು ||
ಶೋಭನಸ್ವರದಿಂದ ವೀಣೆಯಂ ನುಡಿಸುವರ |
ಶೋಭನಕ್ರಮದಿಂದ ನರ್ತನಂ ಗೈವವರ |
ಶೋಭನಸ್ತುತಿಗಳಿಂ ಜಯಶಬ್ದಮಂ ಪೇಳ್ವ ಜನರ ಸಂಭ್ರಮವ ನೋಡು || ೩೨

ಈವಿಭುವಿನೊಡ್ಡಂತಿಯುಂ ನೋಳ್ಪ ಸಮಯದೊಳ್ |
ಸ್ತ್ರೀವಿಲಾಸಿನಿಯರ್ವರ್ಗಳಂತಃಪುರಂಗಳೊಳ್ |
ಭಾವಜಾಂಗನೆ ರತಿಯು ಸೊಬಗುಳ್ಳ ರಾಣಿಗಳ ದರ್ಶನವಗೈದು ಬಂದು ||
ಈವಿಪ್ರದಂಪತಿಗಳಡಿಯೊಳಗೆ ನಿಂದಿರ |
ಲ್ಲೀಸಿದಾನಂದದಿಂದೀದ್ವಿಜೋತ್ತಮನ ಸತಿ |
ಯಾವಸಿತೆಯುಂ ನೋಡಿ ಕೇಳ್ದಳಂತಃಪುರದ ಮಹಿಷಿಗಳ ಸೊಬಗನಂದು || ೩೩

ಎಲೆ ಮಾನಿನೀಮಣಿಯೆ ಕೃಷ್ಣಭೂಪಾಲಕನ |
ಲಲಿತಮಾದಾಕೃತಿಯ ಲಾವಣ್ಯಮಂ ನೋಡಿ |
ಫಲಿತಮಾಯ್ತೆಮ್ಮ ನಯನೋತ್ತಮಮಹೀರುಗಳೀನೃಪನ ಮಹಿಷಿಗಳನು ||
ಲಲನೆ ನಾನಾದೊಡಂ ನೋಳ್ಪೆನೆಂದರು ಬಿಡರು |
ಫಲವೇನು ಪೇಳು ಯೆನ್ನಯ ಕಿವಿಗಳಾವರುಂ |
ಕಲಿತಸಂತುಷ್ಟಿಯಿಂ ಕೇಳ್ದು ಸಫಲಗಳಾಗಲವರ ಗುಣಗಳನು ಪೇಳು || ೩೪

ಎಂದು ಕೇಳಿದೊಡಾಕೆ ವಿಪ್ರನಾರಿಯು ಕುಱಿತು |
ಮಂಗಸುಸ್ಮಿತೆ ಕೇಳು ನಿನಗೊರೆವೆ ತಿಳಿವಷ್ಟು |
ಸುಂದರಾಂಗಿಗಳಾದ ರಾಣಿಗಳ ಗುಣಶೀಲರೂಪಲಾವಣ್ಯಗಳನು ||
ಚೆಂದದಿಂ ಕಿವಿಗೊಟ್ಟು ಕೇಳಮರರಾಜನಾ |
ಮಂದಿರದೊಳವರ ಸೊಬಗೈಶ್ವರ್ಯಭೋಗವಂ |
ಸಂದಿರುವ ಕಾಮಿನಿಯರಿಲ್ಲೆಂದು ಸಕಲರುಂ ಪೇಳುವುದು ಘಟಿಪ್ಪು ಕಾಂತೆ || ೩೫

ಎಲ್ಲರುಂ ಪತಿಭಕ್ತಿಯಿಂ ಪೂರ್ಣವಾಗಿರುವ |
ರೆಲ್ಲರುಂ ಸಕಲಸದ್ಗುಣಗಳಿಂ ತುಂಬಿರುವ |
ರೆಲ್ಲರುಂ ಸೌಂದರ್ಯದಿಂ ಜಲಧಿಕನ್ಯಕಾರೂಪಮಂ ಜಯಿಸಿಪ್ಪರು ||
ಎಲ್ಲರುಂ ತ್ಯಾಗಗುಣದಿಂ ಸುರಭಿಯಂತಿರ್ಪ |
ರೆಲ್ಲರುಂ ಸೌಜನ್ಯಸೌಶೀಲ್ಯಸಮ್ಮಿಶ್ರಿತ |
ರೆಲ್ಲರುಂ ಹರಿಹರಾರಾಧನೆಯೊಳಾಸಕ್ತರೆಲ್ಲರುಂ ನೀತಿಯುತರು || ೩೬

ಎಲ್ಲರುಂ ಮಾತ್ಸರ್ಯಗುಣರಹಿತರಾಗಿರುವ |
ರೆಲ್ಲರುಂ ಲೋಭಮಂ ತೊಱೆದು ಶೋಭಿಸುತಿರುವ |
ರೆಲ್ಲರುಂ ಗರ್ವಗುಣಮಂ ಸ್ವಪ್ನದೊಳ್ಕಾಣರೆಲ್ಲರುಂ ಮದರಹಿತರು ||
ಎಲ್ಲರುಂ ಸರ್ವದಾ ಪುಸಿಯುಸಿರಲಱಿಯದವ |
ರೆಲ್ಲರುಂ ಕಾಠಿನ್ಯಗುಣಹೀನರಾಗಿರ್ಪ |
ರೆಲ್ಲರುಂ ದ್ವೇಷಮಂ ಮಱೆದು ಮಿತ್ರತ್ವದಿಂದನ್ಯೋನ್ಯವಾಗಿರ್ಪರು || ೩೭

ನಳಮಹಾರಾಜಂಗೆ ದಮಯಂತಿಯಂತೆಯುಂ ।
ಬಲಶಾಮನನುಜಂಗೆ ವೈದರ್ಭಿಯಂತೆಯುಂ ।
ವಲವೈರಿಶಕ್ರಂಗೆ ಪೌಲೋಮಿಯಂತೆಯುಂ ಕಶ್ಯಪಂಗದಿತಿಯಂತೆ ॥
ಕಲಶಾಬ್ಧಿಶಯನನಿಗೆ ರಮೆಯಂತೆಯುಂ ಸುಗುಣ ।
ನಿಲಯನಾದೀಕೃಷ್ಣರಾಜಭೂಪಾಲಕಗೆ ।
ಲಲನಾಶಿರೋಮಣಿಗಳಾಗಿರುವ ಮಹಿಷಿಗಳ್ ಸಲೆ ವಿರಾಜಿಸುತಿರ್ಪರು ॥ ೩೮

ಕುಸುಮಬೃಂದಗಳಂತೆ ಶೋಭಿಸುವ ನಗೆಗಳಿಂ ।
ಕುಸುಮಗುಚ್ಛಗಳಂತೆ ಶೋಭಿಸುವ ಕುಚಗಳಿಂ ।
ಕಿಸಲಯಗಳಂತಿರ್ಪ ಪಾಣಿಪಾದಂಗಳಿಂ ಭೃಂಗಕುಂತಳಗಳಿಂದ ॥
ಅಸಮಫಲನಿಚಯದಂತಿರ್ಪಾಧರಂಗಳಿಂ ।
ದೆಸೆವ ಕನಕದ ಲತೆಗಳಂತೆ ಮಹಿಷೀಜನಗ ।
ಳೆಸಮಸಾಯಕಸದೃಶಕೃಷ್ಣನೃಪಕಲ್ಪಕವನಾಶ್ರಯಿಸಿ ನಲಿಯುತಿಹರು ॥ ೩೯

ಸ್ಮಿತಚಂದ್ರಿಕೆಗಳಿಂದ ತಿಲಕದ ಕಳಂಕದಿಂ ।
ನತಮಧ್ಯದಾಕಾಶದಿಂದಧರಸುಧೆಯಿಂದ ।
ಲತಿಧವಳಮುಕ್ತಾಲಲಂತಿಕಾನಕ್ಷತ್ರತತಿಗಳಿಂ ಲಲಿತವಾದ ॥
ರತಿಯಂತೆ ರಾಜಿಸುವ ಪಟ್ಟಮಹಿಷೀಜನರ ।
ಹಿತಚಂದ್ರಸನ್ನಿಭಮುಖಕಾಂತಿಗಳನಾವಗಂ ।
ಪತಿಕೃಷ್ಣರಾಜಲೋಚನಚಕೋರಂ ಕುಡಿದು ಸಂತಸದಿ ನಲಿಯುತಿಪುದು ॥ ೪೦

ಕುಂತಳಘನಂಗಳಿಂ ಕಂಕಣಗಳಿಂದಲುಂ ।
ಸಂತತಂ ಕೊಡುವ ದಾನೋದಕದಧಾರೆಯಿಂ ।
ಕಂತುಶರದಂತೆಸೆವ ಕಡೆಗಣ್ಣ ನೋಟಗಳ ರುಚಿಯೆಂಬ ಮಿಂಚಿನಿಂದ ॥
ಅಂತರಹಿತಾಭರಣಕಾಂತೀಂದ್ರಚಾಪದಿಂ ।
ದಿಂತು ಪೊಳೆಯುತ್ತಿರುವ ರಾಜಮಹಿಷಿಗಳೆಂಬ ।
ನೀತವರ್ಷಾಕಾಲಮಂ ಕಂಡು ಕೃಷ್ಣನೃಪಚಿತ್ತಬರ್ಹಿಯು ಕುಣಿವುದು ॥ ೪೧

ಕೃಷ್ಣೇಂದ್ರಪಟ್ಟಮಹಿಷಿಗಳಂದಚೆಂದಗಳ ।
ನೆಷ್ಟೆಂದು ಬಣ್ಣಿಸಲಿ ಭುವನತ್ರಯಂಗಳೊಳ ।
ಗಿಷ್ಟು ಸೊಬಗುಳ್ಳವರ ನಾ ಕಾಣೆನೆಂದೊರೆದು ಪೋದಳಿವಳಿತ್ತಲಿವರು ॥
ಕೃಷ್ಣರಾಜೇಂದ್ರಸಂದರ್ಶನಪ್ರಾಪ್ತಿಯಿಂ ।
ತುಷ್ಟಮಾನಸರಾಗಿ ತಿರುಗಿ ತಾವಿಳಿದಿರ್ದ ।
ಧಿಷ್ಣ್ಯಕ್ಕೆ ಬರುತ ಕವಿ ಮತ್ತೆ ಸಂತೋಷದಿಂ ನಿಜಸತಿಗೆ ಪೇಳ್ವನಾಗ ॥ ೪೨

ಇಲ್ಲಿ ನೋಡೆಲೆ ಕಾಂತೆ ಕೃಷ್ಣಧರಣೀಪಾಲ ।
ನೆಲ್ಲೆಲ್ಲಿಯುಂ ಮಾಡಿಸುವ ಸುಸಂತರ್ಪಣೆಗ ।
ಳಲ್ಲಿ ಘೃತಸೂಪದಧಿಭಕ್ಷ್ಯಶಾಕಾದಿಮೃಷ್ಟಾನ್ನಂಗಳಂ ಭುಂಜಿಸಿ ॥
ಚೆಲ್ಲಿ ಕೊಡುತಿರುವ ದಕ್ಷಿಣೆಗಳಂ ಕೈಕೊಂಡು ।
ನಿಲ್ಲದೆ ನಿಜಾಲಯಕೆ ಸತಿಸುತರನೊಡಗೊಂಡು ।
ಪಲ್ಲವಿಸಿದಾನಂದದಿಂ ಪೋಪ ಸದ್ವಿಜರ ತಂಡತಂಡಂಗಳನ್ನು ॥ ೪೩

ಸಕಲಸದ್ಗುಣಸಾಂದ್ರಕೃಷ್ಣಭೂಪಾಲಕನ ।
ಸಕಲಭೋಜನಶಾಲೆಯೊಳ್ ಭೋಜನಂಗೈದ ।
ಸಕಲಜನರಿಷ್ಟೆಂದು ಬರೆವ ಕರಣಿಕರೊರ್ವರಿಲ್ಲವೀನಗರದೊಳಗೆ ॥
ಸಕಲಗಗನಸ್ಥಳಂ ಪತ್ರಂಗಳಾದೊಡಂ ।
ಸಕಲಜಲನಿಧಿಗಳುಂ ಕಲೆತು ಮಸಿಯಾದೊಡಂ ।
ಸಕಲಶೂರೋತ್ತಂಸ ಕಾರ್ತವೀರ್ಯಾರ್ಜುನಂ ಬರೆದೊಡಂ ಮುಗಿಯದಾಗ ॥ ೪೪

ದ್ವಿಜರುಂಡು ಚೆಲ್ಲಿದೀತುಪ್ಪ ಹಾಲ್ಮೊಸರುಗಳು ।
ನಿಜವಾದ ಜಲಧಿಗಳ ತೆಱದಿ ಹರಿಯುತ್ತಲಿದೆ ।
ಯಜನ ಸೃಷ್ಟಿಯೊಳಿಲ್ಲವೀಶಾಕರಾಜಿಗಳ್ಭಕ್ಷ್ಯಗಳ ಪೆಸರದೇನೊ ॥
ಕುಜನಶಿಕ್ಷಕಕೃಷ್ಣಭೂಪೇಂದ್ರ ಭೂಸುರ ।
ವ್ರಜಕಿತ್ತ ಪಾಯಸಾಮೃತವಿದೆಂಬಂತೀಗ ।
ಸುಜನರುಸುರುವುದೇನು ಪುಸಿಯೆ ನೋಡೆಲೆ ಕಾಂತೆಯುಂಡವರದೃಷ್ಟಜನವೋ ॥ ೪೫

ಇಂತು ಸಂತರ್ಪಣೆಯ ಸೊಬಗನುರೆ ಬಣ್ಣಿಸುತ ।
ಸಂತಸದಿ ಮನೆಗೈದಿ ಮಾಧ್ಯಾಹ್ನಿಕಾದಿಗಳ ।
ನಂತೆಲ್ಲವಂ ಗೈದು ಶುಚಿಯಾಗಿ ಸತಿಗೈದ ಪಾಕವಂ ಹರಿಗರ್ಪಿಸಿ ॥
ಅಂತರದಿ ಸುತರೊಡನೆ ರುಚಿಯಾಗಿ ಭುಂಜಿಸಿದ ।
ನಂತರದೊಳಾಸತಿಯು ಭೋಜನಂಗೈದ ಬೞಿ ।
ಕಂತರಹಿತಾಹ್ಲಾದದಿಂದ ಜನರಲ್ಲುರಟ ನೋಡಲ್ಕೆ ಪೊಱಮಟ್ಟನು ॥ ೪೬

ಬಂದು ಸತಿಸುತರೊಡನೆಯರಮನೆಯ ಬಾಗಿಲೊ ।
ಳ್ನಿಂದಿರುವ ಗಜಹಯವರೂಥಾದಿರೋಹಕರ ।
ಸಂದಣಿಯ ಬಾಯ ಭಲ್ಲಗಳ ಪಿಡಿದಿರ್ಪವರನಿಂಗ್ಲೀಷುವಾದ್ಯದವರ ॥
ಚೆಂದದಿಂ ಶ್ರುತಿಮಾಱಿಕೊಳಲುಗಳ ನುಡಿಸುವರ ।
ಬಂದುರದಿ ಕಹಳೆತುತ್ತೂರಿಗಳನೂದುವರ ।
ನಿಂದು ಸಾನಂದದಿಂ ಭೇರೀನಗಾರಿಗಳ ಬಡಿವವರ ತೋಱಿಸಿದನು ॥ ೪೭

ವೇಗದಿಂ ಗಾಳಿಯಂ ಜಯಿಸಿರುವ ಕುದುರೆಗಳ ।
ಬೇಗದಿಂದೇಱಿರುವ ತುರುಪಿನ ಸವಾರರಂ ।
ನಾಗಂಗಳೊಳ್ಧ್ವಜವ ಪಿಡಿದು ಕುಳಿತಿರುವರನ್ಕಹಷಾವುಬಾರಿನವರ ॥
ಆಗಸವ ತಿವಿವಂತೆ ಬೆಳ್ಳಿಕಟ್ಟೇಟಗಳ ।
ಕೈಗಳಿಂ ಪಿಡಿದಿರುವರಂ ಹಸರುಬಲ್ಲೆದವ ।
ಱೀಗ ನೀನೋಡಿವರ ಕಂಡ ಮೊತ್ತದೊಳರಿಗಳದೆ ಬಿಱಿಯುದಿರ್ಪುದೇನ ॥ ೪೮

ಚಪ್ಪನ್ನದೇಶದೊಳ್ಸಾಮ್ರಾಜ್ಯಮಂಗೈಯು ।
ತಿಪ್ಪ ಭೂಮಿಪರೊಡನೆ ಮತ್ತಾರಿಗುಂಟೆ ನೋ ।
ಡಿಪ್ಪಸರದೊಳ್ ಜನರು ಪಿಡಿದಿರ್ಪ ಶಂಖಚಕ್ರಾದ್ಯಖಿಳಬಿರುದುಗಳನು ॥
ತಪ್ಪದೆ ಸುನೀತಿಯಂ ಧರಣಿಯಂ ಪಾಲಿಸು ।
ತ್ತಿಪ್ಪ ಕೃಷ್ಣೇಂದ್ರನೀಬಿರುದಗಳ ಸಾಲುಗಳ ।
ನಪ್ಪ! ಬಣ್ಣಿಸಲೆನಗೆ ಸದರಮಲ್ಲಿನ್ನಾರು ಬಣ್ಣಿಪರೊ ಕಾಣೆ ನಾನು ॥ ೪೯

ನೋಡಹಹ! ಕೋಟಿದಿನಕರರು ಧರಣಿಯೊಳೊಂದು ।
ಗೂಡೀಗ ಬರ್ಪರೆಂಬಂತೆ ನವರತ್ನಗಳ ।
ಜೋಡಿಸಿರುವೀಕನಕಕರ್ಣಾಟಪಾಲಕಿಯ ಮಧ್ಯದೊಳ್ ಕೃಷ್ಣೇಂದ್ರನು ॥
ರೂಡಿ ಮಿಗೆ ವಿಷ್ಣುವಂದದಿ ಪೊಳೆಯುತಿರ್ಪವನ ।
ನಾಡಾಡಿಗಳು ನೋಡಲಮ್ಮರೇ ಭುವನದೊಳ್ ।
ನೋಡೀಮಹಾಪ್ರಭುವಿನಪ್ರತಿಮತೇಜಸ್ಸ ಪೊಗಟಬಲ್ಲಾತನಾರು ॥ ೫೦

ಚೆಂದದಿಂ ಗಜಹಯವರೂಥಾದಿಗಳನೇಱಿ ।
ಪಿಂದೆ ಮುಂದೈತಪ್ಪ ನಾನಾಧಿಕಾರಿಗಳ ।
ನಂದದಿಂದೆರಡು ಪಾರ್ಶ್ವಂಗಳೊಳ್ತಾಳ ಮದ್ದಳೆ ಸಿತಾರ್ಸಾರಂಗಿಯು ॥
ಚೆಂದದಿಂ ಮುಖವೀಣೆ ಮೋರ್ಚಂಗ್ಪಿಟೀಲುಗಳ ।
ಪಿಂದೆ ನುಡಿಪಿಂಮೇಳದವರೊಡನೆಯೊಲಪಿನಿಂ ।
ನಿಂದು ಕುಣಿಯುತ್ತಿರುವ ವಾರಕಾಂತಾವೃಂದಮಂ ನೋಡು ನೀನು ರಮಣೀ ॥ ೫೧

ಭೂಪಕುಲದೀಪಕೃಷ್ಣೇಂದ್ರನ ಸವಾರಿಯೊಳ್ ।
ಗಾಘಣಿಪನಾದಿನಪನಾಸುರಪನುಂ ಸೈನ್ಯ ।
ದಾಪೊರೆಯ ಭಾರದಿಂ ಪದಘಾತದಿಂದೇಳ್ವ ದೂಳಿನಿಂ ಯತ್ನದಿಂದ ॥
ಕಾಪುರುಷರಂತೆ ತಲೆ ಕುಗ್ಗಿ ಕಾಣಿಸದೆಯುಂ ।
ತಾಪದಿಂದತಿಭೀತರಾಗಿಯುಂ ಪೋದರವ ।
ಱೀಪರಿಯ ಸೇನೆಯಂ ಕಂಡೋಡದಿರ್ಪರಾರೀನೃಪನ ವೈರಿಗಳೊಳು ॥ ೫೨

ಈರೀತಿಯಿಂದಖಿಲಸಂಭ್ರಮದಿ ನಡೆತಂದು ।
ಧೀರಕೃಷ್ಣೇಂದ್ರನೃಪ ನಜರಬಾದಿನೊಳಿರ್ಪ ।
ಸಾರತರವಾದ ನೃಪಮಂದಿರದ ಚಂದ್ರಶಾಲಾಮಧ್ಯದೊಳ್ ರಾಜಿಪ ॥
ಪಾರವಿಲ್ಲದ ರತ್ನಕಾಂತಿಯಿಂ ಜ್ವಲಿಪ ಭಂ ।
ಗಾರದಾಸನದಲ್ಲಿ ಮಂಡಿಸಲ್ ಮಿಕ್ಕ ಪರಿ ।
ವಾರ ನೃಪಸೇವೆಯೊಳ್ನಿರತರಾಗಿರುತಿರಲು ಸುರುಟಾಗೆ ಪೌಜೊದಗಿತು ॥ ೫೨

ಈವೀರಕೃಷ್ಣರಾಜೋತ್ತಮನ ಪೆಸರಿಂದ ।
ನಾವು ನಿಜಖಡ್ಗಮಂ ಪಿಡಿದು ಯುದ್ಧಕೆ ಪೋದ ।
ಡಾವೈರಿನೃಪರು ನಿಜಖಡ್ಗಮಂ ಕೆಳಗಿಟ್ಟು ಬಾಯೊಳಗೆ ಪುಲ್ಲ ಕಚ್ಚಿ ॥
ಸಾವಿಗಂಜುತ ಕೈಯ ಮುಗಿವರದಱಿಂದನಾ ।
ವೀವಿಭುವಿನಿದಿರಿನೊಳ್ ಸಾಹಸವ ತೋರ್ಪೆವೆಂ ।
ದಾವರಿಸಿ ಜರ್ನಲ್ಲುಕರ್ನಲ್ಲುಮೊದಲಾದ ಸರದಾರರೈತಂದರು ॥ ೫೩

ಆಜನರ ಸನ್ಮಾನದಿಂ ಕಂಡು ಕೃಷ್ಣನೃಪ ।
ರಾಜರಾಜೋತ್ತಮಂ ತಾನಾಜ್ಞೆಯಂ ಕೊಡಲು ।
ಸೋಜಿಗವಿದೆಂಬಂತೆ ವಾಹಿನೀವ್ಯೂಹಮಂ ರಚಿಸಿದರ್ ವೇಗದಿಂದ ॥
ಈಜಗದೊಳಿವರಂತೆ ರಚಿಪರಂ ನಾ ಕಾಣೆ ।
ತೇಜಸ್ವಿಯಾದ ಭಾರದ್ವಾಜಸುತನಂದು ।
ರಾಜೇಂದ್ರನಾದ ಕುರುರಾಜನ ವರೂಥಿನಿಯೊಳಿಂತು ರಚಿಸಿರ್ದನೇನೋ ॥ ೫೪

ಈಪೌಜ ಕಣ್ಣಿಂದ ನೋಡಲಾರಿಗೆ ಶಕ್ಯ ।
ಮೀಪರಿಯರೌದ್ರರಸವನ್ನಿಂತು ಸಹಿಸಬಹು ।
ದೀಪಾಟಿಯಶ್ವಗಳ ವೇಗದೊಳ್ಕೇಲೆಂತು ಧೈರ್ಯದಿಂ ಕುಳಿತಿರ್ಪರೋ ॥
ಈಪಟುರವಂಗಳಂ ಕೇಳಕೂಡದು ಕಿವಿಯೊ ।
ಳೀಪದ್ಮಸಂಭವಂ ಸೃಷ್ಟಿಸಿದ ಧರಣಿಯೊಳ ।
ಗೀಪರಿಯ ಯುದ್ಧಮಂ ಪಿಂದೆ ಗೈದವರಿಲ್ಲ ಸುರದನುಜಮನುಜರೊಳಗೆ ॥ ೫೫

ಪ್ರಳಯದೊಳ್ ಪ್ರಜ್ವಲಿಪ ವೀತಿಹೋತ್ರನ ಧೂಮ ।
ಗಳು ಜಗವ ಮುಸುಕುವಂತೀತೋಪುಗಳ ಧೂಮ ।
ಗಳು ಮುಸುಕಿತೀಜನರನೊಬ್ಬರಂ ಕಾಣೆ ನೀನೆಲ್ಲಿರ್ಪೆ ಮಕ್ಕಳಲ್ಲಿ ॥
ಪ್ರಳಯದೊಳಗಾರ್ಭಟಿಪ ಮೇಘರವಗಳ ತೆಱದಿ ।
ಮೊಳಗುತಿವೆ ತೋಪುಗಳು ಬಾಲಕರ ಬೆದಱುವರ ।
ನಿಲಲುಕೊಡದು ಬೇಗ ಮಕ್ಕಳನ್ನೆತ್ತಿಕೋ ದೂರದೊಳ್ನಿಲ್ಲೋಣ ॥ ೫೬

ಇಂತು ಕವಿ ಸತಿಸುತರನೊಡಗೊಂಡು ದೂರದೊ |
ಳ್ಳಿಂತು ಮತ್ತೀ ಸುರುಟ ಸಂಭ್ರಮದಿ ನೋಡುತಿರೆ |
ಸಂತುಷ್ಟನಾಗಿ ಕೃಷ್ಣೇಂದ್ರ ಸರದಾರರಿಗೆ ಮನ್ನಣೆಯ ಗೈದ ಬಳಿಕ ||
ಸಂತವಿಸಿ ಕೊಳುತಿರುವ ಸಕಲಸೇನಾಜನವು |
ಸಂತಸದಿಯಾಯ್ದುಕೊಳಲೆಂದಮಿತಧನಗಳನ |
ನಂತವಸ್ತ್ರಂಗಳನ್ನೆರಚಿಸಿ ವಿನೋದದಿಂದರಮನೆಗೆ ಪೊಱಮಟ್ಟನು || ೫೮

ಹೊಱಟು ಬೀದಿಗಳೊಳಗೆಯಾರತಿಯ ತಂದೆತ್ತು |
ತಿರುವ ಮುತ್ತೈದೆಯರಿಗಾಭರಣ ಧನರತ್ನ |
ವರವಸ್ತ್ರಗಳ ಕೊಡುತ ಸಂಭ್ರಮದೊಳಾನೆಬಾಗಿಲ ಬಳಿಗೆ ಬಂದು ನಿಲಲು ||
ಹರುಷದಿಂ ಸಕಲಜನರಂಜಲಿಗಳಂ ಮಾಡಿ |
ತರತರದಿ ಕೂಗುತ್ತ ಜಯಶಬ್ದಮಂ ಗೈಯೆ |
ವರರತ್ನದಾರತಿಗಳಂ ನಿವಾಳಿಸಿದರಂತಃಪುರದ ಸ್ತ್ರೀಯರಾಗ || ೫೯

ಬಳಿಕ ಕೃಷ್ಣೇಂದ್ರನೃಪನಂಬಾವಿಲಾಸದೊಳ್ |
ತಳತಳಿಸುತಿರುವ ನವರತ್ನಭದ್ರಾಸನದಿ |
ಕಲಿತಸಂತೋಷದಿಂ ಕುಳಿತಿರಲು ಸಕಲಾಧಿಕಾರಗಳ್ ಭಕ್ತಿಯಿಂದ ||
ನೆಲತನಕ ತಲೆಗಳಂ ಬಾಗಿಸುತ ಮುಜುರೆಯಂ |
ಕಲಿಕಾಲಕೃಷ್ಣನಾದೀಕೃಷ್ಣರಾಜಂಗೆ |
ನಿಲವಿಲ್ಲದೇ ಗೈದರೀಮಹಾವಿಭುಸದೃಶರಾರುಂಟು ಲೋಕದೊಳಗೆ || ೬೦

ನಿಜಶಾಖೆಗಳ ಪದಕ್ರಮಜಟೆಗಳಂ ಪೇೞ್ |
ಸುಜನೋತ್ತಮದ್ವಿಜರು ಸುಫಲಮಂತ್ರಾಕ್ಷತೆಯ |
ಸುಜನರಕ್ಷಕಕೃಷ್ಣರಾಜರಾಜೇಂದ್ರಂಗೆ ವರಸಿ ಕೊಡುತಿರ್ದರಾಗ ||
ಭುಜಗಶಯನಾಂಶನಾದೀಕೃಷ್ಣನೃಪಪದಕೆ |
ನಿಜಶಿರಗಳಂ ಬಾಗಿ ಭಯಭಕ್ತಿಯಿಂದತುಲ |
ಭುಜಬಲಪರಾಕ್ರಮಿಗಳ್ಗೈದಿ ಪೊಡೆಮಡುತಿರ್ದರಾಗಲತಿಸಂಭ್ರಮದೊಳು || ೬೧

ಸಕಲಮುತ್ತೈದೆಯರು ಶೋಭನಂಗಳ ಪಾಡಿ |
ಯಕಳಂಕಕೃಷ್ಣನೃಪಗೆತ್ತುವಾರತಿಗಳಂ |
ನಿಖಿಲವಿದ್ವಜ್ಜನರು ಗೈವಾಶಿಷೋಕ್ತಿಯಂ ಸತಿ ನೋಡು ಧನ್ಯರಾವು ||
ಚಿಕುರಾದಿನಖದವರೆಗೀಕೃಷ್ಣಭೂಪತಿಯ |
ಸಕಲಾಂಗಗಳ ನೋಡು ಬೇಗದಿಂದಿನ್ನೊಮ್ಮೆ |
ಯಖಿಳಭುವನೇಂದ್ರ ಭದ್ರಾಸನವ ಬಿಟ್ಟು ಬಿಜಯಂಗೈವ ಠೀವಿಯಿಂದ || ೬೨

ಇಂತು ಸಂಭ್ರಮದಿಂದ ಕೃಷ್ಣರಾಜೇಂದ್ರನೊ ।
ಡ್ಡಂತಿಯುತ್ಸವವ ಕವಿ ಸತಿಸಹಿತ ನೋಡುತ್ತ ।
ಸಂತಸದಿ ಪೊಗೞುತ್ತ ನಲಿದು ಕುಣಿದಾಡುತ್ತ ಮಕ್ಕಳಿಗೆ ತೋಱಸುತ್ತ ॥
ಸಂತೋಷವಾಯಿತೇ ನಿಮಗೆಂದು ಕೇಳುತ್ತ ।
ಕಂತುಸಮ ಕೃಷ್ಣೇಂದ್ರದರ್ಶನದ ಪುಣ್ಯಮೆಮ ।
ಗಂತವಿಲ್ಲದ ಸಕಲಸಂಪತ್ತುಗಳ ಕೊಡುವುದೆಂದು ತಾಪೇೞ್ದ ಸತಿಗೆ ॥ ೬೩

ಜಯ ಸಕಲಗುಣಸಾಂದ್ರ ಜಯ ವದನಜಿತಚಂದ್ರ ।
ಜಯ ಯದುಕುಲೋತ್ತಂಸ ಜಯ ಹೃಷೀಕೇಶಾಂಶ ।
ಜಯ ಚಾಮರಾಜಸುತ ಜಯ ಭೂಷಣೋಲ್ಲಸಿತ ಜಯ ಸಕಲಶಾಸ್ತ್ರಲಲಿತ ॥
ಜಯ ದೀನಜನಕರುಣ ಜಯ ಸಮಾಖ್ಯಾಭರಣ ।
ಜಯ ಕಾಮಸಮರೂಪ ಜಯ ರಾಜಕುಲದೀಪ ।
ಜಯ ಕೆಂಪನಮ್ಮಾಂಬಾಸುಗರ್ಭಸಂಜಾತ ಜಯ ಜಯ ಕೃಷ್ಣರಾಜನೃಪತೇ ॥ ೬೪

ಶ್ರೀಭೋಜರಾಜಸಂದರ್ಶನದಿ ಸರ್ವರಿಗೆ ।
ಯಾಭಾರತೀದೇವಿಯೊಲಿದು ತಾ ಬರ್ಪವೋ ।
ಲೀಭೂಮಿಪಾಲ ಕೃಷ್ಣೇಂದ್ರನ ಸ್ಮರಣೆಯಿಂದಾತನೊಡ್ಡಂತಿಯನ್ನು ॥
ನಾ ಬಣ್ಣಿಪಂತೆನಗೆ ವಾಗೀಶ್ವ ಕೃಪೆಗೈದ ।
ನೀಭುವನದೊಳಗೆಲ್ಲ ರಾಜಿಪಂತೀಕೃತಿಯ ।
ನೀಭೂತದಯೆಯುಳ್ಳ ಕೃಷ್ಣರಾಜೇಂದ್ರನೇ ಪ್ರೀತಿಯಿಂ ಪೊರೆಯಲೀಗ ॥ ೬೫

ಗೋಕರ್ಣನಗರನರಹರಿಯ ಕೃಪೆಯಿಂದಾನು ।
ರಾಕೇಂದುವದನಕೃಷ್ಣೇಂದ್ರನೊಡ್ಡಂತಿಯ ।
ನ್ನೇಕಾಗ್ರಚಿತ್ತದಿಂ ವಿರಚಿಸಿದೆನೀಕೃತಿಯನೆನ್ನೊಳತಿಕರುಣದಿಂದ ॥
ಲೋಕದೊಳ್ಸುಜನರ್ಕಳೀಕ್ಷಿಸುತ ತಪ್ಪಿರಲ್ ।
ಜೋಕೆ ಮಿಗೆ ತಿದ್ದಿ ಮೆಱಸುವುದೆಂದು ಬೇಡುವೆಂ ।
ಮಾಕಾಂತನುರುದಯದಿ ಮೆಱೆಯಲೀಶತಕ ತಾನೀಭೂಮಿಯೊಳು ಸಂತತಂ ॥

ಇಂತು ತೃತೀಯ ಸಂಧಿ.

ಗ್ರಂಥಂ ಸಂಪೂರ್ಣಂ.

# ಪ್ರಕಟನೆ.

## ಕರ್ಣಾಟಕ ಕಾವ್ಯಕಲಾನಿಧಿ.

ಈ ಮಾಸಪುಸ್ತಕವು ಪ್ರತಿಮಾಸವೂ ಪ್ರಕಟವಾಗುತ್ತದೆ. ಇದರಲ್ಲಿ ಪ್ರಾಚೀನ ಕವಿಗಳ ಉತ್ತಮವಾದ ಕಾವ್ಯ ನಾಟಕ ಚಂಪು ಗದ್ಯ ಛಂದಸ್ಸು ಅಲಂಕಾರ ಮುಂತಾದ ಗ್ರಂಥಗಳು ಮುದ್ರಿಸಲ್ಪಡುತ್ತವೆ. ಇದರಲ್ಲಿ ಅಚ್ಚಾಗುವ ಗ್ರಂಥಗಳಿಗೆ ಬೇರೆಬೇರೆ ಪುಟಸಂಖ್ಯೆಯನ್ನು ಕೊಡುವುದರಿಂದ ಗ್ರಂಥವು ಮುಗಿದಕೂಡಲೆ ಬೇರೆಬೇರೆ ಪುಸ್ತಕಗಳಾಗಿ ಬೈಂಡುಮಾಡಿಸಬಹುದು. ಇದರ ಪ್ರತಿಸಂಚಿಕೆಯಲ್ಲೂ ೪೦ ಪುಟಗಳಿಗೆ ಕಡಮೆ ಯಿಲ್ಲದಿರುತ್ತವೆ.

ಭಾಷಾಭಿಮಾನಿಗಳೆಲ್ಲರೂ ಇದಕ್ಕೆ ಪ್ರೋತ್ಸಾಹ ಮಾಡುವರೆಂದು ನಂಬುತ್ತೇವೆ.

### ಚಂದಾನಿರ್ಣಯವು.

ಸಂವತ್ಸರಕ್ಕೆ ಅಂಚೆ ಸಹಿತ ೩—೬—೦

ಚಂದಾದಾರರಿಗೆ ಹೊರತು ಬಿಡಿಪ್ರತಿ ಒಂದಕ್ಕೆ ೦—೬—೬

ಮುಂಗಡವಾಗಿ ಹಣವನ್ನು ಕಳುಹಿಸದ ಹೊರತು ಸಂಚಿಕೆಗಳು ಕಳುಹಿಸಲ್ಪಡುವುದಿಲ್ಲ.

## ಕರ್ಣಾಟಕ ಕಾವ್ಯಕಲಾನಿಧಿ ಗ್ರಂಥಗಳ ಪಟ್ಟಿ.

೧ ಮಹಾದೇವ ವಿರಚಿತಂ — ಅನುಭವಮುಕುರಂ ... ೦—೩—೦

೨. ಗುಬ್ಬಿಯ ಮಲ್ಲಣಾರ್ಯ ವಿರಚಿತಂ — ಭಾವಚಿಂತಾರತ್ನಂ (ಷಟ್ಪದಿ) ೦—೧೦—೦

೩. ಮದನಕಾದಂಬರಿ ... (ಗದ್ಯಗ್ರಂಥ) ೦—೧೨—೦

೪. [illegible] ವಿರಚಿತಂ, ಮದನವರ್ಧನಾಭ್ಯುದಯಂ (ಷಟ್ಪದಿ) ೦—೩—೦

೫. ಅಗ್ಗಳದೇವ ವಿರಚಿತಂ — ಚಂದ್ರಪ್ರಭಪುರಾಣಂ (ಚಂಪು) ೧—೮—೦

(ಪ್ರಥಮಸಂಪುಟ)

೬. ಮುದ್ದಣಕವಿ ಕೃತ ಶ್ರೀರಾಮಾಶ್ವಮೇಧಂ (ಗದ್ಯಗ್ರಂಥ) ೧—೮—೦

೭ ಚಿಕ್ಕದೇವರಾಯ ವಂಶಾವಳಿ ... (ಚಂಪು) ೧—೪—೦

೮. [illegible] ವಿರಚಿತ — [illegible] (ನಿಘಂಟು) ೧—೪—೦

೯ [illegible] ವಿರಚಿತಂ — [illegible] ..........

(ಪ್ರಥಮ ಸಂಪುಟ)